ಜನಪ್ರಿಯ ಕಲಾಮಾಲಿಕೆ

ಭಾರತೀಯ ಚಿತ್ರಕಲೆ



ಆರ್. ಜೆ. ರಾಯಕರ್

ಕರ್ನಾಟಕ ಲಲಿತಕಲಾ ಅಕಾಡೆಮಿ

ಭಾರತೀಯ ಚಿತ್ರಕಲೆ

ಆರ್.ಜಿ. ರಾಯಕರ್

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - 560 002

BHARATHIYA CHITRAKALE *by R.G. Raykar*
Published by K.Mukundan, Registrar,
Karnataka Lalithakala Academy
Nrupatunga Road, Bangalore - 560 002

First Impression : 1996

ಬೆಲೆ : ರೂ. 5-00

ಮುಖ ಚಿತ್ರ : ರಾಧೆಯ ಕಾಲಿಗೆ ಬಣ್ಣ ಹಚ್ಚುತ್ತಿರುವ ಕೃಷ್ಣ
ಕಾಂಗ್ರಾ ಶೈಲಿ/18ನೆಯ ಶತಮಾನ

ಸಂಪಾದಕರು : ಚಿ.ಸು. ಕೃಷ್ಣ ಸೆಟ್ಟಿ

ಈ ಪುಸ್ತಕದಲ್ಲಿ ಬರುವ ಅಭಿಪ್ರಾಯಗಳು
ಆಯಾ ಲೇಖಕರದ್ದೇ ಹೊರತು
ಅಕಾಡೆಮಿಯದೆಂದು ತಿಳಿಯಲಾಗದು

ಮುದ್ರಣ
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು - 18
ದೂರವಾಣಿ : 6618752, 6613123

ಒಂದು ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಇದುವರೆಗೆ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಅಕಾಡೆಮಿಯು ಜನಪ್ರಿಯ ಕಲಾ ಮಾಲಿಕೆಯಡಿಯಲ್ಲಿ ಸುಲಭ ದರದಲ್ಲಿ ಜನಸಾಮಾನ್ಯರಿಗೂ ಕಲೆಯು ಅರ್ಥವಾಗಲಿ ಎಂಬ ಉದ್ದೇಶದಿಂದ ದೃಶ್ಯಕಲೆ, ಕಲೆಯ ರಸಾಸ್ವಾದನೆ, ಕಲಾ ಪಂಥಗಳು ಈ ವಿಷಯವಾಗಿ ಕಿರು ಪುಸ್ತಕಗಳನ್ನು ಹೊರತರುತ್ತಿದೆ.

ಈ ಮಾಲಿಕೆಯ ಪುಸ್ತಕಗಳನ್ನು ಓದುವುದರಿಂದ ಜನ ಸಾಮಾನ್ಯರಲ್ಲಿ ಕಲಾ ಇತಿಹಾಸವನ್ನು ಪರಿಚಯಿಸುತ್ತಾ ಕಲಾಕೃತಿಯನ್ನು ನೋಡಿ, ಗ್ರಹಿಸಿ, ರಸಾಸ್ವಾದನೆ ಮಾಡಿ ಗುಣ ಮೌಲ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿ ಉತ್ತಮ ಗುಣ ಮೌಲ್ಯವುಳ್ಳ ಕಲಾಕೃತಿಯನ್ನು ಸಂಗ್ರಹಿಸುವಲ್ಲಿ ಆಸಕ್ತಿ ಮೂಡುತ್ತದೆ ಯೆಂಬ ಆಶಯ ನಮ್ಮದಾಗಿದೆ.

ಈ ಮಾಲಿಕೆಯಲ್ಲಿ ಪುಸ್ತಕಗಳನ್ನು ಚಿತ್ರಯಾತ್ರೆಯ ಸಂದರ್ಭದಲ್ಲಿ ಹೊರತರುತ್ತಿರುವುದು ಔಚಿತ್ಯಪೂರ್ಣವಾಗಿದೆ. ಚಿತ್ರಯಾತ್ರೆಯು ನಾಡಿನಾದ್ಯಂತ ಸಂಚರಿಸುವಾಗ ಎಲ್ಲಾ ಪುಸ್ತಕಗಳು ನಾಡಿನ ಮೂಲೆ ಮೂಲೆಗೂ ತಲುಪಬೇಕೆಂಬುದು ನಮ್ಮ ಉದ್ದೇಶವಾಗಿದೆ. ಈ ಮಾಲಿಕೆಯಲ್ಲಿ ಬರೆದಿರುವ ಲೇಖಕರೆಲ್ಲರೂ ಸಂಬಂಧಪಟ್ಟ ವಿಷಯದಲ್ಲಿ ಪರಿಣಿತರೇ ಆಗಿದ್ದಾರೆ. ನಮಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕಿರುಹೊತ್ತಿಗೆಗಳನ್ನು ಬರೆದುಕೊಟ್ಟ ಕಲಾ ಲೇಖಕರಿಗೆ ಆಭಾರಿಯಾಗಿದ್ದೇವೆ. ನಮ್ಮ ಈ ಪ್ರಯತ್ನವನ್ನು ಕಲಾವಿದರೂ, ಕಲಾಸಕ್ತರೂ ತುಂಬು ಹೃದಯದಿಂದ ಸ್ವಾಗತಿಸಿ ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇವೆ.

ಸಿ. ಚಂದ್ರಶೇಖರ

ಅಧ್ಯಕ್ಷರು

ಭಾರತೀಯ ಚಿತ್ರಕಲೆ

ಅಕ್ಷರ ಭಾಷೆಗಿಂತಲೂ ಮೊದಲು ತನ್ನ ಅನಿಸಿಕೆಗಳನ್ನು ಹೊರಹಾಕಲು, ಇತರರೊಂದಿಗೆ ಸಂವಾದಿಸಲು ಮಾನವ ಬಳಸಿಕೊಂಡದ್ದು ಚಿತ್ರಕಲೆಯನ್ನೇ. ಹೀಗೆ ಮಾನವನ ಉಗಮದೊಂದಿಗೇ ಬೆಳೆದು ಬಂದ ಚಿತ್ರಕಲೆಯ ಇತಿಹಾಸವು ಗುರುತಿಸಲು ಸುಲಭವಲ್ಲದಷ್ಟು ಸಹಸ್ರ ಸಹಸ್ರ ವರ್ಷಗಳ ಹಿಂದಕ್ಕೆ ಹೋಗುತ್ತದೆ. ಈ ಮಾತುಗಳು ಭಾರತದ ಚಿತ್ರಕಲೆಗೂ ಅನ್ವಯಿಸುತ್ತದೆ. ಹೀಗೆ ಆದಿಮಕಾಲದಿಂದಲೂ ನಮ್ಮಲ್ಲಿ ನಡೆದು ಬಂದ ಚಿತ್ರಕಲೆಯ ಬಗೆಗೆ ಸುಮಾರು ಕ್ರಿ.ಶ. ೧೮೮೩ ರಿಂದ ಸಂಶೋಧನೆಗಳು ನಡೆಯುತ್ತಿವೆ. ತನ್ನದೇ ಆದ ಒಂದು ನಿಶ್ಚಿತ ಪರಂಪರೆಯನ್ನು, ಶೈಲಿ-ವೈಶಿಷ್ಟ್ಯಗಳನ್ನು ಪಡೆದುಕೊಳ್ಳುವ ಮೊದಲು ಈ ದೇಶದಲ್ಲಿ ಕಲೆಯು ವಿವಿಧ ನೆಲೆಗಳಲ್ಲಿ ಸಾಗಿತ್ತು. ಇವುಗಳಲ್ಲಿ ಮುಖ್ಯವಾದ ಕೆಲವು ನೆಲೆಗಳನ್ನು ಸ್ಥೂಲವಾಗಿ ಪರಿಚಯಿಸುವುದು ಇಲ್ಲಿನ ಆಶಯ.

ಶಿಲಾಯುಗ : (ಕ್ರಿ.ಪೂ. ೬೦೦,೦೦೦)

ಸುಮಾರು ೭೫,೦೦೦ ವರ್ಷಗಳ ಹಿಂದೆಯೇ ಪ್ರಾರಂಭವಾಯಿತೆನ್ನಲಾದ ಶಿಲಾಯುಗವನ್ನು ಪೂರ್ವ ಪ್ರಾಚೀನ ಶಿಲಾಯುಗ, ಪ್ರಾಚೀನ ಶಿಲಾಯುಗ, ಮಧ್ಯಶಿಲಾಯುಗ ಹಾಗೂ ನೂತನ ಶಿಲಾಯುಗಗಳೆಂದು ವಿಂಗಡಿಸಲಾಗಿದೆ. ನಾಗರಿಕತೆಗೆ ಮುಂಚಿನ ಅವಧಿಯ ಈ ಆದಿಮಾನವ ವಾಸವಾಗಿದ್ದುದು ಗುಹೆಗಳಲ್ಲಿ. ತನ್ನ ಆಹಾರಕ್ಕಾಗಿ ಅಂದಿನ ಮಾನವ ಸುತ್ತಮುತ್ತಲಿನ ಪ್ರಾಣಿಗಳನ್ನು ಬೇಟೆಯಾಡುವುದು ಅನಿವಾರ್ಯವಾಗಿತ್ತು. ಹೀಗೆ ತನ್ನ ಬೇಟೆಯನ್ನು ಸುಲಭಗೊಳಿಸಲು ಆಯುಧಗಳನ್ನು ಅವನು ನಿರ್ಮಿಸಿಕೊಂಡ. ಆಗ ತನಗೆ ಲಭ್ಯವಿದ್ದ ಶಿಲೆಗಳನ್ನೇ ಬಳಸಿಕೊಂಡು ವೈವಿಧ್ಯಮಯ ಆಯುಧಗಳನ್ನು ರಚಿಸಿಕೊಂಡ. ಈ ಆಯುಧಗಳಿಂದ ಕಾಡುಪ್ರಾಣಿಗಳನ್ನು ಬೇಟೆಯಾಡಿ ತನ್ನ ಆಹಾರವನ್ನು ಅಂದಿನ ಮಾನವ ಗಳಿಸುತ್ತಿದ್ದ. ಈ ಬೇಟೆಯ ನಂತರದ ವಿರಾಮ ಕಾಲದಲ್ಲಿ ತನ್ನ ಗುಹೆಗಳ ಗೋಡೆಗಳ ಮೇಲೆ ಕಲ್ಲಿನಿಂದ ಗೀಚಿ ಚಿತ್ರಗಳನ್ನು ರಚಿಸುತ್ತಿದ್ದ. ಈ ಚಿತ್ರ ರಚನೆ ವಿವಿಧ ಕಾರಣಗಳಿಂದ ನಡೆದಿರಬಹುದು. ತನ್ನ ಸಂಗಾತಿಗಳಿಗೆ ಬೇಟೆಯ ವಿಷಯವನ್ನು ತಿಳಿಸಲು ಈ ಚಿತ್ರ ಭಾಷೆಯನ್ನು ಅವನು ಅನುಸರಿಸಿರಬಹುದು. ಪ್ರಾಣಿಗಳ ಚಿತ್ರ ಬರೆದರೆ ಆ ಪ್ರಾಣಿ ತನ್ನ ನಿಯಂತ್ರಣಕ್ಕೆ ಬರುತ್ತದೆಂಬ ಭಾವನೆಯಿಂದಲೂ ಅವನು ಚಿತ್ರ ಬರೆದಿದ್ದಾನೆಂದು ಹಲವು

ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹೀಗೆ ಬರೆದ, ಕೊರೆದ ಚಿತ್ರಕ್ಕೆ ಆಯುಧಗಳಿಂದ ಚುಚ್ಚಿದರೆ, ನಿಜವಾದ ಪ್ರಾಣಿಗೇ ಚುಚ್ಚಿದಂತಾಗುತ್ತದೆ ಇತ್ಯಾದಿ ಭಾವನೆಗಳು ಅವನಲ್ಲಿತ್ತು. ಈ ಹಲವು ಕಾರಣಗಳಿಂದ ನಿರ್ಮಿತವಾದ ಈ ಚಿತ್ರಗಳಲ್ಲಿ ಮುಖ್ಯವಾಗಿ ಕಾಡುಕೋಣ, ಕುದುರೆ, ಕರಡಿ, ಜಿಂಕೆ, ತೋಳ, ಕಾಡುಹಂದಿ, ಮೀನು ಇತ್ಯಾದಿಗಳೇ ಇರುವುದು ಗಮನಾರ್ಹ. ಇವುಗಳಲ್ಲಿ ಕೆಲವೆಡೆ ಕೆಂಪು, ಹಳದಿಯಂತಹ ಬಣ್ಣಗಳ ಲೇಪನವೂ ಇದೆ.

ಈ ಕಾಲದ ಮಾನವ ಚಿತ್ರಕಲೆಯೊಂದಿಗೆ ಮಣ್ಣಿನ ಮೂರ್ತಿಗಳನ್ನು ಹಾಗೂ ಕಲ್ಲಿನ ಮೂರ್ತಿಗಳನ್ನು ತಯಾರಿಸುವುದನ್ನು ತಿಳಿದಿದ್ದ. ಅಂತೆಯೇ ಗಡಿಗೆ, ಮಡಕೆಗಳ ಮೇಲೆಯೂ ಚಿತ್ರಗಳನ್ನು ರಚಿಸಿದ್ದಾನೆ. ಗುಹೆಗಳ ಗೋಡೆ, ನೈಸರ್ಗಿಕ ಶಿಲೆಯ ಮಾಡುಗಳ ಮೇಲೆ ಕೆತ್ತನೆ ಮಾಡಿದ ಹಾಗೂ ಬಣ್ಣಗಳಿಂದ ಚಿತ್ರಿತವಾದ ಕೃತಿಗಳೂ ದೊರೆತಿದ್ದು ಅವು ಮಾತೃದೇವತೆಗಳಾಗಿರಬೇಕೆಂದು ಊಹಿಸಲಾಗಿದೆ.

ಆದಿಮ ಗುಹಾ ಚಿತ್ರಗಳು

ಮಾನವ ನಿರ್ಮಿಸಿದ ಗುಹಾ ಚಿತ್ರಗಳು ಪ್ರಪಂಚದಾದ್ಯಂತ ವಿವಿಧ ಕಡೆಗಳಲ್ಲಿ ದೊರೆತಿವೆ. ಯೂರೋಪಿನಲ್ಲಿ ಸುಮಾರು ಹತ್ತಿಪ್ಪತ್ತು ಸಾವಿರ ವರ್ಷಗಳ ಹಿಂದಿನ ಚಿತ್ರಗಳು ದೊರೆತಿವೆ. ಭಾರತದಲ್ಲಿ ಆದಿಮ ಕಾಲದಿಂದ ಹಿಡಿದು ವಿಜಯಗರದ ಕಾಲದವರೆಗಿನ ಗುಹಾ ಚಿತ್ರಗಳು ಕಂಡು ಬಂದಿವೆ. ನಮ್ಮ ದೇಶದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಚಿತ್ರಗಳೆಂದರೆ ಮಧ್ಯಪ್ರದೇಶದ ರಾಯಘಡ ಬೆಟ್ಟದ ಜೋಗಿಪುರ ಗುಹೆಯಲ್ಲಿನ ಚಿತ್ರಗಳು. ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆ ಮತ್ತು ಬಂಡಾ ವಿಂಧ್ಯ ಪರ್ವತ ಪ್ರದೇಶದ ಬುಂದೇಲಖಂಡದ ಮಹದೇವ ಬೆಟ್ಟಗಳು, ಕೈಮೂರ ಬೆಟ್ಟ, ರಾಯಘಡ ಜಿಲ್ಲೆಯ ಸಿಂಗನಪುರ, ಭೂಪಾಲಿನ ಗುಡ್ಡಗಾಡು ಹಾಗೂ ನಮ್ಮ ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಚೀನ ಕಾಲದ ಚಿತ್ರಗಳು ದೊರೆತಿವೆ. ಇವುಗಳಲ್ಲೆಲ್ಲ ಮುಖ್ಯವಾಗಿ ಬೇಟೆ, ನೃತ್ಯ, ಮಿಥುನ, ಪ್ರಾಣಿಗಳು, ಪಕ್ಷಿಗಳು ಇತ್ಯಾದಿಗಳ ಚಿತ್ರಗಳಿವೆ. ಇವುಗಳನ್ನು ಬಹುತೇಕ ಕೆಂಪು, ಬಿಳಿ ಹಾಗೂ ಕಪ್ಪು ಬಣ್ಣಗಳಲ್ಲಿ ಚಿತ್ರಿಸಿದ್ದಾರೆ. ಪ್ರಾಯಶಃ ಗುಹೆ ಮತ್ತು ಶಿಲಾಶ್ರಯ ಚಿತ್ರಗಳ ಸಂಖ್ಯೆಯಲ್ಲಿ ಭಾರತವು ವಿಶ್ವದಲ್ಲಿಯೇ ಗಮನಾರ್ಹವಾಗಿದೆ.

ಸಿಂಧೂ ಸಂಸ್ಕೃತಿಯ ಕಲೆ

ನಮ್ಮ ದೇಶದ ಸಿಂಧೂ ಕಣಿವೆಯ ನಾಗರಿಕತೆಯ ಕಾಲವನ್ನು ಕ್ರಿಸ್ತಪೂರ್ವ ೨೫೦೦ರಿಂದ ೧೫೦೦ ಎಂದು ಇತಿಹಾಸಜ್ಞರು ಗುರುತಿಸಿದ್ದಾರೆ. ಸಿಂಧೂ ನಾಗರಿಕತೆಯ ಕಾಲಕ್ಕೆ ಸಿಂಧೂ ನದಿಯ ಹಾಗೂ ಅದರ ಉಪನದಿಗಳ ದಂಡೆಗಳ ಮೇಲೆ ಮೊಹೆಂಜೊದಾರೊ ಹಾಗೂ ಹರಪ್ಪಾದಂತಹ ದೊಡ್ಡ ನಗರಗಳು ಬೆಳೆದವು. ನಮ್ಮ ದೇಶದ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಸಿಂಧೂನದಿಯ ಸಂಸ್ಕೃತಿಯು ತುಂಬ ಗಮನಾರ್ಹವಾಗಿದೆ. ಸುಮಾರು ಅರ್ಧ

ಶತಮಾನದ ಅವಧಿಯಿಂದ ಈ ಕುರಿತು ಶೋಧನೆಗಳು ನಡೆದಿದ್ದು ತುಂಬ ಮಹತ್ವದ ಕುರುಹುಗಳು ಅಲ್ಲಿ ದೊರೆತಿವೆ. ಈ ನದಿಯ ತಟದಲ್ಲಿದ್ದ ಹರಪ್ಪ ಹಾಗೂ ಮೊಹೆಂಜೊದಾರೊಗಳಲ್ಲಿ ಅಪೂರ್ವವಾದ ಕಲಾಸಂಪತ್ತು ದೊರೆತಿವೆ. ಸುಮಾರು ಐದು ಸಾವಿರ ವರ್ಷಗಳ ಹಿಂದೆ ಅಸ್ತಿತ್ವದಲ್ಲಿತ್ತೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವ ಈ ಸಿಂಧೂ ನಾಗರಿಕತೆ ನಮ್ಮ ದೇಶದ ಪ್ರಾಚೀನ ನಾಗರಿಕತೆಯ ಮೇಲೆ ಬೆಳಕು ಚೆಲ್ಲಿದೆ.

ಈ ಪ್ರದೇಶದ ಉತ್ಖನನದಲ್ಲಿ ದೊರೆತಿರುವ ಅವಶೇಷಗಳ ಮೂಲಕ ಅಂದಿನವರ ಕಲಾಪ್ರಜ್ಞೆಯನ್ನು ಗುರ್ತಿಸಬಹುದಾಗಿದೆ. ಜಿಗುಟು ಮಣ್ಣಿನಿಂದ ರಚಿಸಿದ ಗಡಿಗೆಗಳ ಮೇಲೆ ಅಂದಿನವರು ಚಿತ್ರಗಳನ್ನು ರಚಿಸಿದ್ದಾರೆ. ಅವುಗಳ ಮೇಲೆ ನವಿಲು, ಮೀನು, ಬಾತುಕೋಳಿ ಮುಂತಾದುವುಗಳನ್ನು ವರ್ಣದಲ್ಲಿ ರಚಿಸಲಾಗಿದೆ. ಇಲ್ಲಿ ಮೂರ್ತಿಶಿಲ್ಪಗಳೂ ದೊರೆತಿದ್ದು ಅವುಗಳ ಮೇಲೆ ಬಣ್ಣದ ಲೇಪನವಿದೆ. ಇದರಿಂದಾಗಿ ಅಲ್ಲಿ ಸುಮಾರು ನಾಲ್ಕುಸಾವಿರದ ಐದುನೂರು ವರ್ಷಗಳ ಹಿಂದೆಯೇ ವಿವಿಧ ಬಣ್ಣಗಳನ್ನು ಬಳಸುವಿಕೆ ಅಂದಿನವರಿಗೆ ಗೊತ್ತಿತ್ತು ಎಂಬುದು ತಿಳಿದುಬರುತ್ತದೆ. ಇವುಗಳೊಂದಿಗೆ ಎಲೆಗಳು, ನವಿಲು, ಜಿಂಕೆ, ಆಡು, ನರಿ, ಮಾನವ, ತಾಯಿ-ಮಗು ಮುಂತಾದ ರೇಖಾಚಿತ್ರಗಳೂ ಇವೆ.

ವೇದಯುಗದಲ್ಲಿ ಚಿತ್ರಕಲೆ

ವೇದಕಾಲದ ಚಿತ್ರಕಲೆಯು ಧಾರ್ಮಿಕ ಸ್ವರೂಪವನ್ನು ಪಡೆದಿತ್ತು. ವಿಶೇಷತಃ ಅಂದಿನವರು ತಮ್ಮ ಯಜ್ಞವೇದಿಕೆಗಳನ್ನು ವಿವಿಧ ಬಣ್ಣಗಳ ಚಿತ್ರಗಳಿಂದ ಅಲಂಕರಿಸುತ್ತಿದ್ದರು; ಮಂಡಲ ಚಿತ್ರಗಳನ್ನು ರಚಿಸುತ್ತಿದ್ದರು. ದೇವ-ದೇವತೆಯರ ಚಿತ್ರಗಳನ್ನು ಪಟಗಳ ಮೇಲೆ ಬರೆಯುವ ಪದ್ಧತಿ ಆ ಕಾಲದಲ್ಲಿಯೇ ರೂಢಿಯಲ್ಲಿ ಬಂತು. ಅಂದಿನವರು ಕಲೆಯನ್ನು ಆರಾಧನೆಯ ಉದ್ದೇಶಕ್ಕಾಗಿಯೂ ಬಳಸಲಾರಂಭಿಸಿದರು. ಕಲೆಯಿಂದಲೇ ತಮ್ಮ ಜನ್ಮ ಸಾರ್ಥಕತೆಯನ್ನು ಪಡೆಯುತ್ತದೆ ಹಾಗೂ ಅದರಿಂದಲೇ ಮೋಕ್ಷ ಎನ್ನುವ ಭಾವನೆ ಆಗ ಪ್ರಚಲಿತವಾಗಿತ್ತು. ಅಂತೆಯೇ ಅಂದಿನ ಕಲಾವಿದರು ದೇವ-ದೇವತೆಯರು, ಯಕ್ಷ-ಕಿನ್ನರರನ್ನು ಕುರಿತಂತಹ ಕೃತಿಗಳನ್ನು ರಚಿಸುವುದರಲ್ಲಿ ನಿರತರಾಗಿದ್ದರು.

ಆ ನಂತರದ ಕಾಲದಲ್ಲಿ ವಾತ್ಸಾಯನನ ಕಾಮಸೂತ್ರ, ವಿಷ್ಣು ಧರ್ಮೋತ್ತರ ಪುರಾಣ, ವಿನಯ ಪೀಠಕ, ಚಿತ್ರಸೂತ್ರ, ಬೃಹತ್ ಸಂಹಿತೆ, ಅಭಿಲಷಿತಾರ್ಥ ಚಿಂತಾಮಣಿ, ಮಾನ ಸೋಲ್ಲಾಸ ಮುಂತಾದ ಗ್ರಂಥಗಳು ರಚನೆಯಾಗಿದ್ದು ಇವುಗಳಲ್ಲಿ ಚಿತ್ರಕಲೆಯನ್ನು ಕುರಿತ ಉಲ್ಲೇಖಗಳಿವೆ. ಇವುಗಳ ಮೂಲಕ ಅಂದಿನ ಕಲಾವಿದರು ಚಿತ್ರ, ಶಿಲ್ಪಗಳ ರಚನೆಗೆ ಅನುಸರಿಸುತ್ತಿದ್ದ ವಿಧಾನಗಳು, ತಂತ್ರಗಳು ಹಾಗೂ ವಸ್ತುವಿನ ಬಗ್ಗೆ ತಿಳಿಯಬಹುದಾಗಿದೆ.

ಬೌದ್ಧ ಚಿತ್ರಕಲೆ

ಗೌತಮ ಬುದ್ಧನ ಜನ್ಮಸ್ಥಳವಾದ ಭಾರತವು ಬೌದ್ಧಕಲೆಯ ಮೂಲಸ್ಥಾನವೂ

ಆಗಿದೆ. ಇದು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಅಂದಿನ ಆಡಳಿತಗಾರರಾಗಿದ್ದ ಹರ್ಷವರ್ಧನ, ಕಾನಿಷ್ಕ ಹಾಗೂ ಅಶೋಕ ಮುಂತಾದವರು ಕಲೆಯ ಬಗ್ಗೆ ತೋರಿಸಿದ ಅತೀವ ಆಸಕ್ತಿಯೇ ಕಾರಣ. ಈ ರಾಜರು ಕಲಾತ್ಮಕವಾದ ಸ್ತೂಪಗಳನ್ನು ಬಹಳ ಸಂಖ್ಯೆಯಲ್ಲಿ ನಿರ್ಮಿಸಿದರು. ಬುದ್ಧಗಯಾದಲ್ಲಿರುವ ಧರ್ಮಚಕ್ರ ಪೂಜೆಯ ದೃಶ್ಯಾವಳಿಯಲ್ಲಿ ಬುದ್ಧನ ಜನನ, ಸ್ತೂಪದ ಚಿತ್ರಣ, ಸಪ್ತ ಅಶ್ವಾರೂಢ ಸೂರ್ಯ ಮುಂತಾದ ಬುದ್ಧನ ಜೀವನಕ್ಕೆ ಸಂಬಂಧಿಸಿದ ದೃಶ್ಯಗಳಿವೆ.

ಬೌದ್ಧ ಕಲೆಯ ಕೊಡುಗೆಯಾದ ಬುದ್ಧನ ವಿಗ್ರಹವು ಭಾರತೀಯ ಕಲೆಯ ಇತಿಹಾಸದಲ್ಲಿ ಮಹತ್ವದ ಸ್ಥಾನ ಗಳಿಸಿದೆ. ಆ ಕಾಲದ ಕಲಾಕೌಶಲ್ಯದ ಪ್ರತೀಕವಾದ ಈ ವಿಗ್ರಹದಲ್ಲಿನ ಮುಖಭಾವ, ವಸ್ತ್ರವನ್ನು ಹೊದ್ದಿರುವ ರೀತಿ ಇತ್ಯಾದಿಗಳು ಗಮನಾರ್ಹವಾಗಿದ್ದು ನೋಡುಗರಲ್ಲಿ ಧಾರ್ಮಿಕ ಭಾವನೆಯನ್ನು ಉಂಟುಮಾಡುವಂತಿದೆ. ಬೌದ್ಧ ಕಲೆಯ ಆಶಯವು ನೋಡುಗರಲ್ಲಿ ಹೃದಯ ವೈಶಾಲ್ಯವನ್ನು ಬೆಳೆಸುವುದು; ಅಹಂಭಾವವನ್ನು ತೊರೆಸುವುದು; ಸಂಕುಚಿತತೆಯನ್ನು ಇಲ್ಲವಾಗಿಸುವುದು. ಒಟ್ಟಾರೆಯಾಗಿ ಲೋಕವು ಸುಖ, ಸಮೃದ್ಧಿಗಳಿಂದ ಕೂಡಿರಬೇಕೆಂಬುದು ಬೌದ್ಧ ಚಿತ್ರಕಲೆಯ ಬಯಕೆಯಾಗಿತ್ತು. ಬೌದ್ಧಧರ್ಮವು ಭಾರತದಲ್ಲಿ ಆರಂಭವಾದರೂ ಜಪಾನ್, ಚೀನಾ, ಮಧ್ಯಏಶಿಯಾ, ಟಿಬೆಟ್, ಸಿಲೋನ್, ಬರ್ಮಾ ಇತ್ಯಾದಿ ದೇಶಗಳಲ್ಲೂ ಹರಡಿದ್ದರಿಂದ, ಬೌದ್ಧ ಕಲಾಕೃತಿಗಳು ಆ ದೇಶಗಳಲ್ಲೂ ಕಂಡುಬರುತ್ತವೆ.

ಬೌದ್ಧ ಚಿತ್ರಕಾರರು ಸನ್ಯಾಸಿಗಳಾದುದರಿಂದ ಚಿತ್ರಕಲೆಯನ್ನು ತಮ್ಮ ಧರ್ಮದ ಪ್ರಸಾರಕ್ಕಾಗಿ ಬಳಸಿಕೊಂಡರು. ಬುದ್ಧನನ್ನೇ ದೈವತ್ವಕ್ಕೇರಿಸಿದ ಈ ಅನುಯಾಯಿಗಳು ಅನೇಕ ಪವಾಡಗಳನ್ನು, ಪುರಾಣಗಳನ್ನು ತಮ್ಮ ಕೃತಿಗಳ ವಸ್ತುವಾಗಿಸಿಕೊಂಡರು. ಸುಮಾರು ೨ ರಿಂದ ೭ನೆಯ ಶತಮಾನದವರೆಗೆ ಈ ಬಗೆಯ ಚಿತ್ರಗಳು ಕಂಡು ಬರುತ್ತವೆ. ಮೂರನೆಯ ಶತಮಾನದ ಪಾಳಿ ಬೌದ್ಧ ಗ್ರಂಥವಾದ 'ವಿನಯ ಪೀಠಕ'ದಲ್ಲಿ ಪ್ರಸೇಂದ್ರ ರಾಜನ ಚಿತ್ರಶಾಲೆಯನ್ನು ಕುರಿತ ಉಲ್ಲೇಖವಿದೆ. ಆ ಶಾಲೆಯ ಗೋಡೆಗಳ ಮೇಲೆ ಆಕರ್ಷಕವಾದ ಚಿತ್ರಗಳು ಕಂಗೊಳಿಸುತ್ತಿದ್ದವು ಎಂದು ಹೇಳಲಾಗಿದೆ. ಒಂದು ವಿಶಿಷ್ಟವಾದ ವಿಧಾನದಿಂದ ಚಿತ್ರಿಸುವ ಈ ಬೌದ್ಧ ಭಿತ್ತಿಚಿತ್ರಗಳ ನಿರ್ಮಾಣಕ್ಕೂ ನಿಸರ್ಗದಲ್ಲಿನ ಬಣ್ಣಗಳನ್ನೇ ಬಳಸಿಕೊಂಡಿರುವುದು ಗಮನಾರ್ಹ.

ಅಜಂತಾ ಚಿತ್ರಕಲೆ

ಭಾರತೀಯ ಚಿತ್ರಕಲೆಯಲ್ಲಿ ಅಜಂತಾ ಗುಹಾಚಿತ್ರಗಳು ಅದ್ವಿತೀಯ ಸ್ಥಾನವನ್ನು ಗಳಿಸಿವೆ. ಮುಂಬಯಿಯಿಂದ ಈಶಾನ್ಯಕ್ಕಿರುವ ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿ ದಟ್ಟ ಕಾಡಿನ ಮಧ್ಯೆ ಇರುವ ಈ ಗುಹಾಚಿತ್ರಗಳು ವಿಶ್ವದ ಗಮನ ಸೆಳೆದಿವೆ. ಪ್ರಾಚೀನ ಚಿತ್ರಕಲೆಯ

ದೃಷ್ಟಿಯಿಂದ ಈ ಚಿತ್ರಗಾರರ ಸಾಧನೆ ಅದ್ಭುತವಾದುದು. ನಮ್ಮ ದೇಶದ ಚಿತ್ರಕಲಾ ಪರಂಪರೆಯಲ್ಲಿ ಅತ್ಯಂತ ಗಮನಾರ್ಹವೂ, ಶಿಖರಪ್ರಾಯವೂ ಆದ ಈ ಕಲಾಕೃತಿಗಳು ಮಾನವನ ವಿಕಾಸದ ಪರಿಪಕ್ವ ಹಂತದಲ್ಲಿ ಮೂಡಿದವು ಎಂದರೆ ತಪ್ಪಾಗಲಿಕ್ಕಿಲ್ಲ.

ಮುಂಬಯಿಯಿಂದ ಈಶಾನ್ಯಕ್ಕೆ ಸುಮಾರು ೧೨೦ ಮೈಲುಗಳ ದೂರದಲ್ಲಿ ಸಹ್ಯಾದ್ರಿ ಗಿರಿ ಶ್ರೇಣಿಗಳ ದಟ್ಟವಾದ ಅರಣ್ಯಗಳ ನಡುವೆ ಅಜಂತಾ ಇದೆ. ಇಲ್ಲಿನ ದಟ್ಟ ಅರಣ್ಯದಲ್ಲಿ ಸುಮಾರು ೨೫೦ ಅಡಿಗಳಷ್ಟು ಎತ್ತರದ ಬೆಟ್ಟ-ಗುಡ್ಡಗಳ ನಡುವೆ ಕಣಿವೆಗಳಲ್ಲಿ ವಾಘೋರಾ ಎಂಬ ನದಿ ಸರ್ಪಾಕಾರವಾಗಿ ಪೂರ್ವಕ್ಕೆ ಹರಿದು ಬರುತ್ತದೆ. ಈ ಪ್ರದೇಶದಲ್ಲಿ ಅರ್ಧ ಚಂದ್ರಾಕಾರದ ಕಪ್ಪುಬಂಡೆಗಳನ್ನು ಕೊರೆದು ಬೌದ್ಧ ಸನ್ಯಾಸಿಗಳು ಅಲ್ಲಿ ವಾಸಮಾಡುತ್ತಿದ್ದರು. ಹೀಗೆ ಕ್ರಿ. ಪೂ. ೨ನೇ ಶತಮಾನದಿಂದ ಕ್ರಿ.ಶ. ಹತ್ತನೆಯ ಶತಮಾನದವರೆಗೆ ವಿವಿಧ ಘಟ್ಟಗಳಲ್ಲಿ ಈ ಗುಹೆಗಳಲ್ಲಿ ಭಿತ್ತಿಚಿತ್ರಗಳ ನಿರ್ಮಾಣ ಸಾಗಿದೆ.


ಇಲ್ಲಿನ ಚಿತ್ರಗಳು ಮೂಲತಃ ಬೌದ್ಧಧರ್ಮವನ್ನು ಕುರಿತುದಾದುವು. ಈ ಪಂಥದ ಉಪದೇಶಗಳು, ಕಥೆಗಳೊಂದಿಗೆ ಸ್ತ್ರೀಯರ ಸೌಂದರ್ಯವನ್ನು ವೈಭವೀಕರಿಸುವಂತಹ ನೃತ್ಯ, ಸಂಗೀತಾದಿಗಳ ಚಿತ್ರಗಳೂ ಇಲ್ಲಿ ಮೂಡಿಬಂದಿವೆ. ಇಲ್ಲಿನ ಚಿತ್ರಕಾರರು ಆಗ ಪ್ರಚಲಿತವಿದ್ದ ಚಿತ್ರ ಲಕ್ಷಣಶಾಸ್ತ್ರವನ್ನು ಆಧಾರವಾಗಿಟ್ಟುಕೊಂಡು ಇಲ್ಲಿನ ಈ ಮಹಾನ್ ಭಿತ್ತಿಚಿತ್ರಗಳನ್ನು ತಮ್ಮ ಕಲಾತ್ಮಕ ಪ್ರಜ್ಞೆಯೊಂದಿಗೆ ಸೃಷ್ಟಿಸಿದ್ದಾರೆ.

ಇಲ್ಲಿ ವಾಸ್ತುಶಿಲ್ಪ, ಶಿಲ್ಪ ಹಾಗೂ ಚಿತ್ರ-ಈ ಮೂರೂ ಮಾಧ್ಯಮಗಳು ಸಂಗಮಗೊಂಡಿವೆ. ''ಭಾರತದ ಪ್ರೇಕ್ಷಣೀಯ ಸ್ಥಳಗಳಲ್ಲಿಯೇ ಅತಿ ಶ್ರೇಷ್ಠವಾದುವುಗಳಲ್ಲಿ ಒಂದು'' ಎಂದು ಪಂಡಿತ ನೆಹರೂ ಅವರಿಂದ ಕರೆಸಿಕೊಂಡ ಅಜಂತಾದ ಗುಹೆಗಳಲ್ಲಿ ಬೌದ್ಧ ಧರ್ಮದ ಜಾತಕ ಕಥೆಗಳು, ಬುದ್ಧನ ಜನ್ಮ ಕುರಿತ ಕೃತಿಗಳು, ಶಿಬಿ ಚಕ್ರವರ್ತಿಯ ಕಥೆ, ಶೃಂಗಾರ ನಿರತ ಮಹಿಳೆಯರು, ಅಪ್ಸರೆಯರು, ಯಕ್ಷ-ಕಿನ್ನರರು, ಪುಲಿಕೇಶಿಯ ಆಸ್ಥಾನದಲ್ಲಿ ಪರ್ಷಿಯಾದ ರಾಯಭಾರಿ, ತಾಯಿ-ಮಗು, ಪದ್ಮಪಾಣಿ ಬೋಧಿಸತ್ವ, ಪ್ರಾಣಿ- ಪಕ್ಷಿಗಳು, ವೃಕ್ಷಲತೆಗಳು ಈ ಮುಂತಾದ ವೈವಿಧ್ಯಮಯ ವಸ್ತುವಿಷಯಗಳಿವೆ. ವಿಶೇಷತಃ ಇಲ್ಲಿನ ಕಲಾವಿದರು ಸ್ತ್ರೀಯರನ್ನು ವಿಶಿಷ್ಟವಾಗಿ ಚಿತ್ರಿಸಿದ್ದಾರೆ. ಅಂತೆಯೇ ಗ್ಲಾಡ್‌ಸ್ಟನ್ ಸೊಲೊಮನ್ ೧೯೩೨ರಲ್ಲಿ 'ಅಂಜತಾ ಗುಹೆಯ ಸ್ತ್ರೀಯರು' ಎಂಬ ಪುಸ್ತಕ ರಚಿಸಿದ್ದು ಇದರಲ್ಲಿ ಅಲ್ಲಿನ ಸ್ತ್ರೀಯರ ವೈಭವೀಕೃತ ಚಿತ್ರಗಳ ಬಗ್ಗೆ ವಿಶದವಾಗಿ ವಿವರಿಸಿದ್ದಾರೆ. ಹೆಸರಾಂತ ಕವಿ ಡಿ.ಹೆಚ್.ಲಾರೆನ್ಸ್ ''ಅಜಂತಾ ಭಿತ್ತಿಚಿತ್ರಗಳಲ್ಲಿ ಪರಿಶುದ್ಧವಾದ ಪರಿಪೂರ್ಣತೆ, ಸರಳತೆಯೊಂದಿಗೆ ಸ್ತ್ರೀ-ಪುರುಷ ಸಂಬಂಧಗಳ ಯಥಾರ್ಥ ನಿರೂಪಣೆಯಿದೆ. ಅಜಂತಾ ಕಲೆಯು ಅಮೋಘ ನಾಗರಿಕತೆಯೊಂದರ ಪರಾಕಾಷ್ಠ ಸ್ಥಿತಿ; ಮಾನವನ ಬೆಳವಣಿಗೆಯ ಒಂದು ಹಂತ'' ಎಂದು ಗುರುತಿಸಿದ್ದಾರೆ.

ಬೌದ್ಧ ಸನ್ಯಾಸಿಗಳಿಂದ ಚಿತ್ರಿಸಲ್ಪಟ್ಟ ಈ ಚಿತ್ರಕಲೆಯು ಭಾರತದ ಅಭಿಜಾತ



ಮಾತೃದೇವತೆ–ಮೊಹೆಂಜೊದಾರೊ – ಕ್ರಿ.ಪೂ. 2500



ವರಾಹ–ಗುಪ್ತರ ಕಲೆ – 4ನೇ ಶತಮಾನ



ಕಲ್ಪಸೂತ್ರದಲ್ಲಿನ ಚಿತ್ರ–ರಾಜಸ್ಥಾನದ ಮಂಡುವಿನಲ್ಲಿ ಕಾಗದದ ಮೇಲಿನ ಕೃತಿ – ಕ್ರಿ.ಶ. 1439



ಕಲ್ಯಾಣ ಸುಂದರ ಶಿವ – ಪಲ್ಲವ–ಚೋಳ – 9ನೇ ಶತಮಾನ



ಗೀತ ಗೋವಿಂದದಲ್ಲಿನ ಚಿತ್ರ – ಕಾಂಗ್ರಾಶೈಲಿ – 18ನೇ ಶತಮಾನ



ಕೃಷ್ಣ ಗೋಪಿಯರು – ಬಾಶೋಲಿ ಶೈಲಿ – 18ನೇ ಶತಮಾನ



ಜಹಾಂಗೀರ್ ಚಕ್ರವರ್ತಿ – ಮೊಘಲರ ಕಲೆ – 17ನೇ ಶತಮಾನ



ಬೆಣ್ಣೆ ಕೃಷ್ಣ – ತಂಜಾವೂರು ಶೈಲಿ – 18ನೇ ಶತಮಾನ

ಕಲೆಯಾಗಿದ್ದು, ವಿಶ್ವಕ್ಕೆ ಭಾರತೀಯ ಸಂಸ್ಕೃತಿ ನೀಡಿರುವ ವಿಶಿಷ್ಟಕಾಣಿಕೆಯಾಗಿದೆ. ಶಾಂತಿಯನ್ನು ಪ್ರೋತ್ಸಾಹಿಸುವಂತಹ ಇಲ್ಲಿನ ಕಲೆಯು ಇಹಜೀವನವನ್ನು ರಾಗ-ದ್ವೇಷ ರಹಿತವನ್ನಾಗಿ ಮಾಡುವ ಆಶಯದ್ದು. ಅಂತೆಯೇ ಇಲ್ಲಿನ ಕಲಾಪರಂಪರೆಯು ಭಾರತೀಯ ಕಲೆಯಲ್ಲಿ ಉನ್ನತ ಸಂಪ್ರದಾಯಗಳನ್ನು ರೂಪಿಸುವಲ್ಲಿ ಕಾರಣವಾಯಿತು.

ಹೀಗೆ ಹಲವಾರು ಶತಮಾನಗಳ ಹಿಂದೆ ಸೃಷ್ಟಿಯಾದ ಭಾರತದ ಈ ಕಲಾನಿಧಿ ನಾಗರಿಕ ಪ್ರಪಂಚದ ಗಮನಕ್ಕೆ ಬಂದುದು ಇತ್ತೀಚೆಗಷ್ಟೇ. ೧೮೪೪ರಲ್ಲಿ ಮೇಜರ್ ಗಿಲ್ ಎಂಬ ಬ್ರಿಟಿಷ್ ಅಧಿಕಾರಿಯ ಗಮನಕ್ಕೆ ಮೊಟ್ಟಮೊದಲು ಈ ಗುಹೆಗಳು ಬಂದವು. ಅಲ್ಲಿಯವರೆಗೆ ಅಜ್ಞಾತವಾಗಿದ್ದ ಈ ಗುಹೆಗಳಲ್ಲಿನ ಕಲಾವೈಭವವನ್ನು ಕಂಡು ಹಲವಾರು ಕಲಾತಜ್ಞರು ಬೆರಗಾಗಿದ್ದಾರೆ. ೧೮೭೫ರಲ್ಲಿ ಗ್ರಿಫಿತ್ ಅವರು ಮುಂಬಯಿ ಕಲಾಶಾಲೆಯ ವಿದ್ಯಾರ್ಥಿಗಳ ನೆರವಿನಿಂದ ಅಲ್ಲಿನ ಚಿತ್ರಗಳ ಪ್ರತಿಕೃತಿ ಮಾಡಿಕೊಂಡರು. ೧೯೦೯ರಲ್ಲಿ ಲೇಡಿ ಹೆರಿಂಗ್ ಹ್ಯಾಂ ಭಾರತಕ್ಕೆ ಬಂದು ಈ ಚಿತ್ರಗಳನ್ನು ಅಭ್ಯಸಿಸಿ ಸಚಿತ್ರ ಗ್ರಂಥವೊಂದನ್ನು ಪ್ರಕಟಿಸಿದರು. ಇದಲ್ಲದೆ ಜೇಮ್ಸ್ ಫರ್ಗ್ಯುಸನ್, ಬರ್ಜಸ್, ಇ.ಬಿ. ಹ್ಯಾವೆಲ್ ಮುಂತಾದ ಕಲಾತಜ್ಞರೂ ಇವುಗಳನ್ನು ವಿಶ್ಲೇಷಿಸಿ ಹಲವು ಗ್ರಂಥಗಳನ್ನು ಬರೆದಿದ್ದಾರೆ.

ಬಾದಾಮಿಯ ಚಿತ್ರಕಲೆ (ಕ್ರಿ.ಶ. ೫೦೦ರಿಂದ ೭೫೭)

ಇಂದಿನ ಕರ್ನಾಟಕದ ಉತ್ತರ ಭಾಗದಲ್ಲಿರುವ ಬಾದಾಮಿಯನ್ನು ಕೀರ್ತಿವರ್ಮ, ಇಮ್ಮಡಿ ಪುಲಿಕೇಶಿ, ವಿಜಯಾದಿತ್ಯ, ವಿಕ್ರಮಾದಿತ್ಯ, ಮಂಗಳೇಶ ಮುಂತಾದ ಪ್ರಸಿದ್ಧ ರಾಜರು ಆಳಿದರು. ಸಂಸ್ಕೃತಿ ಹಾಗೂ ಕಲೆಗಳ ಬಗ್ಗೆ ಆಸಕ್ತರಾಗಿದ್ದ ಈ ರಾಜರುಗಳು ಕಲೆಯನ್ನು ಪ್ರೋತ್ಸಾಹಿಸಿದರು. ಇದರ ಫಲವಾಗಿ ಇಲ್ಲಿ ಗುಹಾಂತರ ದೇವಾಲಯಗಳ ರಚನೆಯಾಗಿದೆ. ಈ ಗುಹೆಗಳಲ್ಲಿ ಶಿವ, ವಿಷ್ಣು, ಬ್ರಹ್ಮ, ಜಿನ, ಬುದ್ಧ ಮುಂತಾದವರನ್ನು ಕುರಿತಂತಹ ಕಲಾಭಿವ್ಯಕ್ತಿಯಿದೆ. ಇಲ್ಲಿನ ಮೂರನೆಯ ಗುಹೆಯು ವಿಷ್ಣುವನ್ನು ಕುರಿತಾದುದು. ಈ ಗುಹೆಯಲ್ಲಿ ಶೈವ ಧರ್ಮದ ಹಲವಾರು ಚಿತ್ರಗಳಿವೆ. ಇಂದು ಬಹುತೇಕ ಲುಪ್ತವಾಗಿರುವ ಇವುಗಳಲ್ಲಿ ಶಿವ-ಪಾರ್ವತಿ, ವಾದ್ಯಗಾರರು, ಮಾನವರು ಹಾಗೂ ಅವರ ಉಡುಗೆ ತೊಡುಗೆಗಳು, ಶಿರೋಭೂಷಣಗಳು ಗಮನಾರ್ಹವಾಗಿವೆ. ಇಲ್ಲಿನ ಭಿತ್ತಿಚಿತ್ರಗಳ ರಚನೆಗೆ ಅಜಂತಾ ಮತ್ತು ಬಾಗ್‌ಗಳಲ್ಲಿ ಅನುಸರಿಸಿದ ತಂತ್ರವನ್ನೇ ಅನುಸರಿಸಲಾಗಿದೆಯೆಂದು ವಿದ್ವಾಂಸರು ಗುರುತಿಸಿದ್ದಾರೆ. ಇಲ್ಲಿನ ಹಲವು ಚಿತ್ರಗಳನ್ನು ನಮ್ಮ ಕರ್ನಾಟಕದ ಹೆಸರಾಂತ ಕಲಾವಿದರಾಗಿದ್ದ ಎಂ.ವಿ. ಮಿಣಜಿಗಿಯವರು ಪ್ರತಿಕೃತಿ ಮಾಡಿದ್ದಾರೆ.

ಚೋಳರ ಕಲೆ (ಕ್ರಿ.ಶ. ೯ರಿಂದ ೧೨ನೇ ಶತಮಾನ)

ಚೋಳರ ರಾಜಧಾನಿಯಾಗಿದ್ದ ತಂಜಾವೂರು ಕಲೆಗಳ ದೃಷ್ಟಿಯಿಂದ ಪ್ರಸಿದ್ಧವಾಗಿದೆ. ಇಲ್ಲಿನ ಬೃಹದೀಶ್ವರ ದೇವಾಲಯವು ಶಿಲ್ಪಕಲೆಯ ದೃಷ್ಟಿಯಿಂದ ನಮ್ಮ ದೇಶದಲ್ಲಿಯೇ

ಗಮನಾರ್ಹವಾದುದು. ಇಲ್ಲಿನ ಗೋಡೆಗಳಲ್ಲಿ ಚೋಳರ ಚಿತ್ರಕಲೆಯ ಹಲವು ಮಾದರಿಗಳನ್ನು ಕಾಣಬಹುದು. ನಟರಾಜ, ಕೈಲಾಸದಲ್ಲಿ ಶಿವ, ಶೈವಸಂತರು, ತ್ರಿಪುರ ಸಂಹಾರ, ನಂದಿಯ ವಿವಾಹ, ದೇವ ಕನ್ಯೆಯರ ನರ್ತನ, ವಾದ್ಯಗಾರರು, ಯುದ್ಧದ ದೃಶ್ಯ ಮೊದಲಾದುವುಗಳು ಇಲ್ಲಿನ ಚಿತ್ರಗಳಲ್ಲಿ ಮುಖ್ಯವಾದುವು. ವಿಶೇಷತಃ ಇಲ್ಲಿನ ಸಮುದ್ರ ಮಥನ ದೃಶ್ಯದಲ್ಲಿ ಅದರಿಂದ ಹುಟ್ಟಿದ ಕಲ್ಪವೃಕ್ಷ, ಉಚ್ಚೈಶ್ರವಸ್, ಐರಾವತ, ಕಾಮಧೇನು ಮುಂತಾದುವುಗಳನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ಇಲ್ಲಿನ ಪಾರ್ವತಿ ದೇವಾಲಯದ ಮುಖಮಂಟಪದಲ್ಲಿ ವಿಜಯನಗರ ಕಾಲದ ಶಿವಪುರಾಣಕ್ಕೆ ಸಂಬಂಧಿಸಿದ ಹಲವಾರು ಭಿತ್ತಿಚಿತ್ರಗಳಿವೆ.

ಜೈನ ಚಿತ್ರಕಲೆ (ಕ್ರಿ.ಶ. ೧೧ರಿಂದ ೧೫ನೇ ಶತಮಾನ)

ಭಾರತೀಯ ಚಿತ್ರಕಲೆಗೆ ಜೈನರ ಕೊಡುಗೆಯೂ ಗಮನಾರ್ಹವಾದುದು. ಆ ಕಾಲದಲ್ಲಿ ಬಂಗಾಲ, ಬಿಹಾರಗಳು 'ಪಾಲಿ ಶೈಲಿ'ಯ ಕಲೆಗೆ ಹೆಸರಾದ ಪಾಲರಾಜರ ಆಳ್ವಿಕೆಗೊಳ ಪಟ್ಟಿದ್ದವು. ಈ ರಾಜ್ಯಗಳು ನಮ್ಮ ದೇಶದ ಪೂರ್ವದಿಕ್ಕಿನಲ್ಲಿರುವುದರಿಂದ ಇವರ ಕಲೆಯನ್ನು 'ಪೂರ್ವಿ ಶೈಲಿಯ ಕಲೆ' ಎಂದೂ ಗುರುತಿಸುವ ಪರಿಪಾಠವಿದೆ. ಈ ಆಳರಸರು ಜೈನ ಗ್ರಂಥಗಳ ಹಸ್ತಪ್ರತಿಗಳಿಗಾಗಿ ಅನೇಕ ಸಂದರ್ಭ ಚಿತ್ರಗಳನ್ನು ಬರೆಯಿಸಿದರು. ಇದೇ ರೀತಿ ನಮ್ಮ ದೇಶದ ಪಶ್ಚಿಮದ ರಾಜ್ಯಗಳಾದ ಗುಜರಾತ್, ರಾಜಸ್ತಾನಗಳಲ್ಲೂ ಜೈನ ಚಿತ್ರಕಲೆ ಹೆಚ್ಚಾಗಿ ಚಲಾವಣೆಯಲ್ಲಿತ್ತು. ಅಂತೆಯೇ ಈ ಜೈನ ಚಿತ್ರ ಶೈಲಿಗೆ 'ಪಶ್ಚಿಮೀ ಶೈಲಿ' ಎಂದೂ ಕರೆಯಲಾಗುತ್ತದೆ.

ಹಲವಾರು ಜೈನ ಗ್ರಂಥಗಳಲ್ಲಿ ಚಿತ್ರಗಳನ್ನು ರಚಿಸಲಾಗಿದೆ. ಅವುಗಳಲ್ಲಿ ಧವಳ,ಮಹಾಧವಳ, ಮಹಾಪುರಾಣ, ಕಲ್ಪಸೂತ್ರ, ಕಾಲಕಾಚಾರ್ಯ ಕಥಾ, ಸೀಮಿತ್‌ನಾಮ, ವಸಂತ ವಿಳಾಸ ಮುಂತಾದ ಮುಖ್ಯ ಗ್ರಂಥಗಳು ಕರ್ನಾಟಕದಲ್ಲಿ ದೊರಕಿದವು. 'ಸುವಾಸನಾಹಾಚಾರಿಯಂ' ಎಂಬ ಹಸ್ತಪ್ರತಿಯು ಮೇವಾರದ ದೇವಕುಲನಾಟಕದಲ್ಲಿ ರಚಿತವಾದುದಾಗಿದ್ದು ಇದರಲ್ಲಿ ೩೭ ಅಪೂರ್ವ ಸಂದರ್ಭ ಚಿತ್ರಗಳಿವೆ.

ಜೈನ ಚಿತ್ರಕಲಾಶೈಲಿಯು ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಇದರಲ್ಲಿ ವ್ಯಕ್ತಿಗಳಿಗೆ ವಿಶಾಲವಾದ ಎದೆ, ಅಗಲವಾದ ಕಣ್ಣು, ತ್ರಿಕೋನಾಕೃತಿಯ ಚೂಪಾದ ಮೂಗು, ಬಿಲ್ಲಿನಾಕಾರದ ಹುಬ್ಬುಗಳು, ಕೋನಯುಕ್ತವಾದ ಮುಖ, ತೆಳುವಾದ ಸೊಂಟಗಳಿರುವುದು ವಿಶೇಷ. ಈ ಶೈಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ಬದಿಮುಖಗಳಲ್ಲಿ ಹೊರಚಾಚಿದಂತೆ ಇನ್ನೊಂದು ಬದಿಯ ಕಣ್ಣನ್ನು ಚಿತ್ರಿಸುವುದು. ಇಲ್ಲಿನ ಚಿತ್ರಗಳಲ್ಲಿ ತಿಳಿನೀರಳೆ, ಕೆಂಪು, ನೀಲ, ಹಳದಿ, ಬಿಳಿ ಹಾಗೂ ಹಸಿರು ವರ್ಣಗಳನ್ನು ಮುಖ್ಯವಾಗಿ ಬಳಸಲಾಗುತ್ತದೆ. ಕುಂಕುಮ ಬಣ್ಣ ಪ್ರಧಾನವಾಗಿರುವ ಇವುಗಳಲ್ಲಿ ಚಿನ್ನ ಹಾಗೂ ರಜತ ವರ್ಣಗಳ ಬಳಕೆಯೂ ಇದೆ.

ದಖ್ಖನಿ ಚಿತ್ರಕಲೆ (ಕ್ರಿ.ಶ. ೧೪೮೨-೧೫೧೮)

ಕರ್ನಾಟಕದ ಉತ್ತರ ಭಾಗದಲ್ಲಿರುವ ಬಿಜಾಪುರ ಹಾಗೂ ಅಹಮದ್‌ನಗರಗಳ ಆಳರಸರು ಚಿತ್ರಕಲೆಗೆ ವಿಶೇಷ ಪ್ರೋತ್ಸಾಹ ನೀಡಿದರು. ವಿಶೇಷತಃ ಮಹಮದ್ ಷಹಾ ಹಾಗೂ ಹುಸೇನ್ ನಿಜಾಮು ಷಹಾರ ಕಾಲದಲ್ಲಿ ಚಿತ್ರಕಲೆಗಳ ಪ್ರಭಾವವಿದೆ. ಪ್ರಮಾಣಬದ್ಧತೆಯೊಂದಿಗೆ ತೆಳುವಾದ ಆಕೃತಿಗಳು, ವಿಶಿಷ್ಟವಾದ ರೇಖಾ ವಿನ್ಯಾಸಗಳು ಈ ಚಿತ್ರಕಲೆಯ ಗುಣಲಕ್ಷಣಗಳಲ್ಲಿ ಪ್ರಮುಖವಾದುವು. ಈ ದಖ್ಖನಿ ಚಿತ್ರಕಲೆಯ ದೃಷ್ಟಿಯಿಂದ 'ತಾರಿಫ್-ಇ-ಹುಸೇನ್ ಶಾಹಿ' ಎಂಬ ಸಚಿತ್ರ ಗ್ರಂಥ ಹಾಗೂ 'ನುಜುಮ್-ಅಲ್-ಉಲೂಮ್' ಎಂಬ ನಕ್ಷತ್ರಶಾಸ್ತ್ರದ ಗ್ರಂಥಗಳೂ ಮುಖ್ಯವಾದುವು. ಇದರಂತೆಯೇ 'ಕಿತಾಬ್-ಇ-ಸೌರಸ್' ಎಂಬ ಸಂಗೀತ ಶಾಸ್ತ್ರದ ಗ್ರಂಥವೂ ಗಮನಾರ್ಹವಾದುದು.

ವಿಜಯನಗರದ ಚಿತ್ರಕಲೆ (ಕ್ರಿ.ಶ. ೧೪ರಿಂದ ೧೭ನೆಯ ಶತಮಾನ)

ವಿಜಯನಗರದ ರಾಜಧಾನಿಯಾಗಿದ್ದ ಹಂಪೆಯನ್ನು ಕೇಂದ್ರವಾಗಿಟ್ಟುಕೊಂಡು ಈ ವಿಜಯನಗರ ಚಿತ್ರಕಲಾ ಶೈಲಿ ಬೆಳೆಯಿತು. ಈ ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹಕ್ಕ-ಬುಕ್ಕರು ಲಲಿತ ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಈ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ, ಅಂದರೆ ಕೃಷ್ಣದೇವರಾಯನ ಕಾಲದಲ್ಲಿ ಬಂದ ವಿದೇಶಿ ಪ್ರವಾಸಿ ಪಯಸ್ ಹೇಳುವಂತೆ, ಅರಮನೆಯ ಹೆಬ್ಬಾಗಿಲಿನ ಅಕ್ಕಪಕ್ಕಗಳಲ್ಲಿ ಎರಡು ಪೂರ್ಣ ಆಕೃತಿಯ ಚಿತ್ರಗಳನ್ನು ಇಡಲಾಗಿತ್ತಂತೆ. ಅವುಗಳಲ್ಲಿ ಒಂದು ಕೃಷ್ಣ ದೇವರಾಯನದು, ಇನ್ನೊಂದು ಅವನ ತಂದೆಯದಾಗಿದ್ದು ಇವು ಉತ್ತಮ ಕಲಾಕೃತಿಗಳಾಗಿದ್ದವು.

ಹಂಪೆ, ತಾಡಪತ್ರಿ, ಕಾಂಜೀಪುರ, ಕಾಳಹಸ್ತಿ, ತಿರುಪತಿ, ಚಿದಂಬರಂ, ಕುಂಭಕೋಣಂ, ಶ್ರೀರಂಗ, ತಿರಮಲೈಪುರ ಮುಂತಾದೆಡೆಗಳಲ್ಲಿ ಈ ವಿಜಯನಗರ ಶೈಲಿಯ ಕಲಾಕೃತಿಗಳು ಸಾಕಷ್ಟು ಜನಪ್ರಿಯವಾಗಿದ್ದವು. ಹಂಪೆಯ ವಿರೂಪಾಕ್ಷಸ್ವಾಮಿ ದೇವಾಲಯದ ಮೇಲ್ಛಾವಣಿಯಲ್ಲಿ ವಿದ್ಯಾರಣ್ಯ, ಅರ್ಜುನನಿಂದ ಮತ್ಸ್ಯಬೇಧ, ತ್ರಿಪುರಾಂತಕ ಶಿವ, ದಶಾವತಾರ, ತಂಜಾವೂರು ಶೈಲಿಯಲ್ಲಿನ ಶಿವಪಾರ್ವತಿಯರ ವಿವಾಹ ಮುಂತಾದ ಭಿತ್ತಿಚಿತ್ರಗಳು ಈ ಶೈಲಿಯ ಉತ್ತಮ ಉದಾಹರಣೆಗಳಾಗಿವೆ. ಇದರಂತೆಯೇ ಲೇಪಾಕ್ಷಿ, ಸೋಮಪಲ್ಲಿ, ಎಡೆಯೂರು ದೇವಾಲಯಗಳಲ್ಲೂ ಈ ಶೈಲಿಯ ಚಿತ್ರಗಳಿವೆ. ಪಾಪನಾಶೇಶ್ವರ ದೇವಾಲಯದ ಮಂಟಪದಲ್ಲಿ ರಾಮಾಯಣ, ಮಹಾಭಾರತ ಹಾಗೂ ಪುರಾಣಗಳ ಹಲವು ಸನ್ನಿವೇಶಗಳೊಂದಿಗೆ ಗಿರಿಜಾ ಕಲ್ಯಾಣ, ದಕ್ಷಿಣಾಮೂರ್ತಿ, ರಾಮಪಟ್ಟಾಭಿಷೇಕ, ವಟಪತ್ರ ಕೃಷ್ಣ ಚಿತ್ರಗಳೂ ಇವೆ.

ವಿಜಯನಗರಕ್ಕೆ ಸೇರಿದ್ದ ಲೇಪಾಕ್ಷಿಯಲ್ಲಿ ಕನ್ನಡ ಸಾಮಂತರಾಜ ವಿಡುವಣ್ಣ, ವೀರಭದ್ರ ಸ್ವಾಮಿ ದೇವಾಲಯವನ್ನು ನಿರ್ಮಿಸಿದ್ದು ಅಲ್ಲಿನ ಭಾವಣೆಯಲ್ಲೂ ಸಾವಿರಾರು ಚಿತ್ರಗಳಿದ್ದು

ಇವು ಇಂದಿಗೂ ಲೇಪಾಕ್ಷಿ ಚಿತ್ರಗಳೆಂದೇ ಪ್ರಸಿದ್ಧವಾಗಿವೆ. ಕುಂಭಕೋಣ, ತಂಜಾವೂರುಗಳಲ್ಲಿಯೂ ಈ ವಿಜಯನಗರ ಕಾಲದಲ್ಲಿ ಚಿತ್ರಗಳು ರಚಿತವಾಗಿದ್ದು ಇವುಗಳಲ್ಲಿ ಊರ್ಧ್ವತಾಂಡವ ನಟರಾಜ, ಭೈರವ, ಕೈಲಾಸನಾಥ, ಶ್ರೀದೇವಿ, ಭೂದೇವಿ, ಶಕ್ತಿಗಣಪತಿ, ಸುಬ್ರಹ್ಮಣ್ಯ, ಷಣ್ಮುಖ ಸ್ವಾಮಿ, ಬ್ರಹ್ಮ-ವಿಷ್ಣು-ಶಿವ, ಗೌರಿ, ಅನ್ನಪೂರ್ಣೆ, ಮೃತ್ಯುಂಜಯ, ಪದ್ಮಿನಿ ಮುಂತಾದುವು ಮುಖ್ಯವಾಗಿವೆ. ಮೈಸೂರಿನಲ್ಲಿಯೂ ಮುಮ್ಮಡಿ ಕೃಷ್ಣರಾಜರು, ನಾಲ್ಮಡಿ ಕೃಷ್ಣರಾಜ ಒಡೆಯರು ಹಾಗೂ ಟಿಪ್ಪು ಸುಲ್ತಾನರು ಈ ವಿಜಯನಗರ ಶೈಲಿಗೆ ಪ್ರೋತ್ಸಾಹ ನೀಡಿದರು.

ಮೊಘಲ್ ಚಿತ್ರಕಲೆ (ಕ್ರಿ.ಶ. ೧೫೦೦-೧೫೮೦)

ಮೊಘಲ್ ಸಾಮ್ರಾಜ್ಯ ಸ್ಥಾಪಕನಾದ ಬಾಬರನು ಚಿತ್ರಕಲಾ ಪ್ರೇಮಿಯೂ ಆಗಿದ್ದು ಅವನು ೧೫೨೬ರಲ್ಲಿ ಭಾರತಕ್ಕೆ ಬಂದಾಗ ಅವನೊಡನೆ ಪರ್ಷಿಯಾದ ಹಲವು ಕಲಾವಿದರೂ ಬಂದರು. ಈ ಪರ್ಷಿಯಾದ ಕಲಾವಿದರು ಹಾಗೂ ಭಾರತೀಯ ಕಲಾವಿದರ ಮಿಲನದಿಂದ ಇಂಡೋ-ಪರ್ಷಿಯಾ ಅಥವಾ ಮೊಘಲ್ ಚಿತ್ರಕಲೆ ಎನ್ನುವಂತಹ ಹೊಸ ಚಿತ್ರಕಲಾ ಶೈಲಿ ಮೂಡಿ ಬಂತು. ಇದರೊಂದಿಗೆ ಮಂಗೋಲಿಯಾದ ಕಲೆಯ ಪ್ರಭಾವವೂ ಇದರ ಮೇಲಾಯಿತು. ಮೂಲತಃ ಬಿಹಜದ್ ಎಂಬ ಕಲಾವಿದನಿಂದ ಪರ್ಷಿಯಾದಲ್ಲಿ ಬೆಳೆದ ಈ ವರ್ಣಚಿತ್ರಕಲಾ ಪರಂಪರೆಯನ್ನು ಮೊಘಲರು ಇಲ್ಲಿಗೆ ತಂದು ಅದನ್ನು ಮೊಘಲ್ ಕಲೆಯಾಗಿಸಿದರು.

ಈ ಮೊಘಲ್ ಚಿತ್ರಕಲೆಯು ಅಕ್ಬರನ ಆಳ್ವಿಕೆಯ ಕಾಲದಲ್ಲಿ ಉನ್ನತ ಸ್ಥಿತಿಗೆ ತಲುಪಿತಲ್ಲದೆ ಇದನ್ನೇ ಈ ಶೈಲಿಯ ಸುವರ್ಣಯುಗ ಎಂದು ಹೇಳಬಹುದಾಗಿದೆ. ಉದಾರಿಯಾಗಿದ್ದ ಅಕ್ಬರನು ಭಾರತದ ವಿವಿಧ ಭಾಗಗಳಿಂದ ನೂರಕ್ಕೂ ಹೆಚ್ಚು ಹಿಂದೂ ಕಲಾವಿದರನ್ನು ಕರೆಸಿ ಅವರಿಗಾಗಿ ಚಿತ್ರಶಾಲೆಗಳನ್ನು ಸ್ಥಾಪಿಸಿದನಲ್ಲದೆ ಅವರಿಂದ ಕಲಾಕೃತಿಗಳನ್ನು ಮಾಡಿಸಿದ. ಅಕ್ಬರನ ಆಸ್ಥಾನದಲ್ಲಿದ್ದ ಕಲಾವಿದರಲ್ಲಿ ದಸವಂತ, ಬಾಸ್ವಾನ್ ಎಂಬುವವರು ಪ್ರಸಿದ್ಧರಾಗಿದ್ದು ಅವರು ರಚಿಸಿದ ಕೃತಿಗಳನ್ನು ಇಂದಿಗೂ ಹೆಸರಿಸಲಾಗುತ್ತದೆ.

ಅಕ್ಬರನು ತನ್ನ ತಂದೆಯಿಂದ ಪ್ರಾರಂಭವಾಗಿದ್ದ 'ಹಮ್‌ಝುನಾಮಾ' ಗ್ರಂಥವನ್ನು ಮುಖ್ಯಯೋಜನೆಯಾಗಿ ಕೈಗೆತ್ತಿಕೊಂಡನಲ್ಲದೆ, ಅದರಲ್ಲಿ ನೂರಾರು ಕಲಾವಿದರಿಂದ ಸಂದರ್ಭ ಚಿತ್ರಗಳನ್ನು ಬರೆಸಿದ. ೧೨ ಸಂಪುಟಗಳ ಈ ಗ್ರಂಥದಲ್ಲಿನ ಸುಮಾರು ೨೦೦ ಚಿತ್ರಗಳು ಈಗಲೂ ಉಳಿದಿವೆ ೧೫೮೮ರಲ್ಲಿ ಪ್ರಕಟವಾದ 'ಅನ್ವರೀ ದಿವಾನ್' ಎಂಬ ಪುಸ್ತಕದ ಪುಟಗಳಲ್ಲಿ ಹಲವಾರು ಪ್ರಾಣಿ, ಪಕ್ಷಿಗಳ ಹಾಗೂ ಹೂವಿನ ಬಳ್ಳಿಗಳನ್ನು ಚಿತ್ರಿಸಲಾಗಿದ್ದು ಅವುಗಳಲ್ಲಿ ಚಿನ್ನದ ಬಣ್ಣಗಳನ್ನು ಬಳಸಲಾಗಿದೆ. ಇದರಂತೆಯೇ 'ತಾರೀಖ್-ಎ-ಖಾನದಾಸ್-ಎ-ತೈಮೂರಿಯಾ' ಹಾಗೂ 'ಅಕ್ಬರ್‌ನಾಮಾ' ಗ್ರಂಥಗಳಲ್ಲಿ ಸಾಮ್ರಾಟನ ಜೀವನದ ಹಲವು ಘಟನಾವಳಿಗಳನ್ನು ನಿರೂಪಿಸುವ ಚಿತ್ರಗಳಿವೆ.

ಮೊಘಲ್ ಚಿತ್ರಕಲೆ ಜಹಾಂಗೀರ್ (೧೬೦೫-೧೬೩೮) ಹಾಗೂ ಷಹಜಹಾನರ (೧೬೩೮-೧೬೫೮) ಕಾಲದಲ್ಲಿಯೂ ಅಭಿವೃದ್ಧಿ ಹೊಂದಿತು. ಷಹಜಹಾನನ ಆಸ್ಥಾನ ಕಲಾವಿದರಾಗಿದ್ದ ರಾಮದಾಸ ಮತ್ತು ಅವನ ಮಗ ಹರಿದಾಸ ಎಂಬ ಕಲಾವಿದರು 'ಫರ್‌ವಾಲ್' ಕಿರುಚಿತ್ರ ಶೈಲಿಯ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ಗಮನಾರ್ಹವಾಗಿ ಬೆಳೆಯುತ್ತಿದ್ದ ಮೊಘಲ್ ಕಲೆ ಔರಂಗಜೇಬನ ಕಾಲದಲ್ಲಿ ತನ್ನ ಮಹತ್ವವನ್ನು ಕಳೆದುಕೊಂಡು ಅಸ್ತಂಗತವಾಗುವ ದಿಸೆಯಲ್ಲಿ ಸಾಗಿತು.

ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ರೂಪುಗೊಂಡ ಈ ಕಲೆಯಲ್ಲಿ ವರ್ಣಗಳ ಬಳಕೆಯೂ ಅರ್ಥಪೂರ್ಣವಾಗಿದೆ. ನವರಸಗಳ ಭಾವನೆಗೆ ಅನುಗುಣವಾಗಿ ಶೃಂಗಾರಕ್ಕೆ ಶ್ಯಾಮಲ, ಹಾಸ್ಯಕ್ಕೆ ಬಿಳಿ, ಕರುಣೆಗೆ ಬೂದು, ರೌದ್ರಕ್ಕೆ ಕೆಂಪು, ವೀರಕ್ಕೆ ಹಳದಿ, ಭಯಾನಕಕ್ಕೆ ಕಪ್ಪು ಬೀಭತ್ಸಕ್ಕೆ ನೀಲಿ, ಶಾಂತಕ್ಕೆ ಹಸಿರು, ಅದ್ಭುತಕ್ಕೆ ಸ್ವರ್ಣ ಬಣ್ಣಗಳ ಬಳಕೆ ಇಲ್ಲಿ ಕಂಡು ಬರುತ್ತದೆ.

ರಜಪೂತ ಚಿತ್ರಕಲೆ (ಕ್ರಿ.ಶ. ೧೫೫೦-೧೯೦೦)

ಮೊಘಲ್ ಚಿತ್ರಕಲೆ ಚಲಾವಣೆಗೆ ಬಂದ ಸಮಯದಲ್ಲಿಯೇ ರಜಪೂತ ಚಿತ್ರಕಲೆ ಕೂಡಾ ಚಲಾವಣೆಗೆ ಬಂತು. ರಾಜಸ್ಥಾನ ಕಲೆ ಎಂದೂ ಕರೆಯಲ್ಪಡುವ ಈ ಕಲೆಯಲ್ಲಿ ಮುಖ್ಯವಾಗಿ ಎರಡು ಶಾಖೆಗಳಿವೆ. ಮೊದಲನೆಯದು ಜಯಪುರ ಶೈಲಿಯಾದರೆ, ಎರಡನೆಯದು ಪಹಾಡಿ ಶೈಲಿ. ಜಯಪುರ ಶೈಲಿಯು ವಿಶೇಷವಾಗಿ ಜಯಪುರ, ಉದಯಪುರ, ಜೋಧಪುರ್, ಚಿತ್ತೂರ್, ನಾಥದ್ವಾರ, ಬಿಕಾನೇರ್ ರಾಜರುಗಳ ಆಸ್ಥಾನಗಳಲ್ಲಿ ಅರಳಿತು. ಬುಂದೇಲ್‌ಖಂಡದ ಝುಝುರ್‌ಸಿಂಗ್ ಮತ್ತು ಚಂಪತ್‌ರಾಯ್ ಅವರುಗಳೂ ಈ ಕಲೆಗೆ ಪ್ರೋತ್ಸಾಹ ನೀಡಿದರು. ಈ ರಜಪೂತ ಕಲೆಯು ತನ್ನ ಔನ್ನತ್ಯವನ್ನು ಕಂಡಿದ್ದು ೧೮ನೆಯ ಶತಮಾನದಲ್ಲಿ ಕಾಟೋಚ್ ರಾಜರ ಆಡಳಿತದ ಕಾಲದಲ್ಲಿ. ಈ ಸಂದರ್ಭದಲ್ಲಿ ರಚಿತವಾದ ಕೃತಿಗಳಲ್ಲಿ ಹಿಂದೂ ಧರ್ಮಕ್ಕೆ ಸಂಬಂಧಿಸಿದ ಹಾಗೂ ಜನರ ದೈನಂದಿನ ಜೀವನದ ಘಟನೆಗಳಿವೆ.

ಅಮರಶತಕದ ಶ್ಲೋಕಗಳಿಗೆ ಚಿತ್ರರೂಪ ನೀಡಿದುದು ಈ ಕಲೆಯ ಕೊಡುಗೆಯಾಗಿದೆ. ಇವು ೧೬೫೨ರ ಸುಮಾರಿಗೆ ಸರ್ಜನ್‌ಗಡದಲ್ಲಿ ರಚಿತವಾದುವೆಂದು ಹೇಳಲಾಗಿದೆ. ಕಥೆ ಮತ್ತು ಕಾವ್ಯಗಳೆರಡರ ಅನುಭವವನ್ನು ನೀಡುವಂತಹ ಈ ಚಿತ್ರಗಳಲ್ಲಿ ಕಥಾ ನಿರೂಪಣಾ ವಿಧಾನಕ್ಕೆ ಪ್ರಾಮುಖ್ಯವಿದೆ. ಈ ರಜಪೂತ ಕಲೆಯಲ್ಲಿ ರಾಗಮಾಲಾ ಚಿತ್ರಗಳು ಹಾಗೂ ಪ್ರಣಯಾಧಾರಿತ ಚಿತ್ರಗಳೂ ಇದ್ದು ಇವುಗಳು ರಾಧಾ-ಕೃಷ್ಣರ ವಸ್ತುವಿನ ಮೂಲಕ ಹೆಚ್ಚಾಗಿ ಬೆಳೆದಿದೆ. ಸಂಗೀತದ ರಾಗಗಳಿಗೆ ದೃಶ್ಯರೂಪ ನೀಡಿದಂತಹ ರಾಗಮಾಲಾ ಚಿತ್ರಗಳಲ್ಲಿ ಭಾರತೀಯ ಸಂಗೀತದ ಸತ್ವವನ್ನು ಚಿತ್ರಗಳ ಮೂಲಕ ಬಿಂಬಿಸಲಾಗಿದೆ. ಇವುಗಳಲ್ಲಿ ಸಂಗೀತ, ಸಾಹಿತ್ಯ ಮತ್ತು ಚಿತ್ರ ಈ ಮೂರೂ ಏಕತ್ರವಾಗಿವೆ.

''ಪ್ರಪಂಚದ ಉತ್ತಮ ಕಲಾಶ್ರೇಣಿಯಲ್ಲಿ ರಜಪೂತ ಕಲಾವಿದರಿಗೆ ಶ್ರೇಷ್ಠಸ್ಥಾನ ಸಲ್ಲಬೇಕಾಗಿದೆ'' ಎಂದು ಡಾ.ಆನಂದಕುಮಾರ ಸ್ವಾಮಿಯವರಿಂದ ಕರೆಸಿಕೊಂಡಂತಹ ಈ ಕಲೆಯು ಮುಖ್ಯವಾಗಿ ರೂಪುಗೊಂಡಿದ್ದು ಹಿಂದೂ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ವೈಷ್ಣವ ಭಕ್ತಿಗೀತೆಗಳು, ಶ್ರೀಕೃಷ್ಣನ ಆರಾಧನೆ ಮುಂತಾದವುಗಳ ಪ್ರೇರಣೆಯಿಂದ.

ಬಾಶೋಲಿ ಚಿತ್ರಕಲೆ (ಕ್ರಿ.ಶ ೧೭-೧೮ನೆಯ ಶತಮಾನ)

ರಾವಿ ನದಿಯ ದಂಡೆಯ ಮೇಲಿರುವ ಬಾಶೋಲಿಯಲ್ಲಿ ವಿಶಿಷ್ಟವಾದ ಚಿಕಣಿ ಚಿತ್ರಗಳ ಸಂಪ್ರದಾಯ ಮೂಡಿಬಂತು. ರಾಜರುಗಳ ಆಶ್ರಯದಲ್ಲಿದ್ದ ಮೊಘಲ್ ಮತ್ತು ರಜಪೂತ ಕಲಾವಿದರು ಈ ಬಾಶೋಲಿ ಶೈಲಿಗೆ ಹೊಸ ಹುಟ್ಟು ನೀಡಿದರು. ಜಾನಪದ ಸೊಗಡಿನಿಂದ ಕೂಡಿದ ಈ ಕಲೆಯೂ ಕಾಂಗ್ರಾದಂತೆ ಹಿಮಾಲಯದ ತಪ್ಪಲಲ್ಲಿ ಬೆಳೆಯಿತು. ಬಾಶೋಲಿ ರಾಜರು ವಿಷ್ಣು ಭಕ್ತರಾದುದರಿಂದ ಈ ಶೈಲಿಯ ಕಲೆಯಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಕೃತಿಗಳೇ ಹೆಚ್ಚಾಗಿವೆ. ಗೀತ ಗೋವಿಂದ, ಕೃಷ್ಣನಲೀಲೆ, ಭಾಗವತ ಪುರಾಣ, ರಾಮಾಯಣಗಳೊಂದಿಗೆ ನಲ್ಲ-ನಲ್ಲೆಯರ ಮಿಲನದಂತಹ ಪ್ರಣಯ ದೃಶ್ಯಗಳೂ ಈ ಕಲೆಯಲ್ಲಿ ಕಂಡು ಬರುತ್ತದೆ.

ರಾಜಾ ಕೃಪಾಲಪಾಲನ ಕಾಲದಲ್ಲಿ ರಚಿತವಾದ ಭಾನುದತ್ತದ 'ಚಿತ್ತರಸಮಂಜರಿ'ಯ ಹಸ್ತಪ್ರತಿಗಾಗಿ ಕಲಾವಿದ ದೇವಿದಾಸನು ಚಿತ್ರಿಸಿದ ಕಿರುಚಿತ್ರವೊಂದು ಈ ಬಾಶೋಲಿ ಶೈಲಿಯ ಮೊತ್ತಮೊದಲ ಕೃತಿ ಎನ್ನಲಾಗಿದೆ. ಬಾಶೋಲಿ ಶೈಲಿಯಲ್ಲಿ ಹಿಂದಕ್ಕೆ ಸರಿದಿರುವಂತಹ ಹಣೆಯುಳ್ಳ ಮುಖಗಳು, ಕಮಲಪುಷ್ಪದಂತಹ ದೊಡ್ಡದಾದ ಭಾವಪೂರ್ಣ ಕಣ್ಣುಗಳು ಗಮನಾರ್ಹವಾಗಿವೆ. ಈ ಕಲಾವಿದರು ಮೂಲ ವರ್ಣಗಳಾದ ಕೆಂಪು, ಹಳದಿ ಹಾಗೂ ನೀಲಿಗಳನ್ನೇ ಹೆಚ್ಚಾಗಿ ಬಳಸಿದ್ದಾರಲ್ಲದೆ ಇದರೊಂದಿಗೆ ಬಂಗಾರದ ಹಾಗೂ ಬೆಳ್ಳಿಯ ಬಣ್ಣಗಳನ್ನು ಚಾಲನೆಗೆ ತಂದಿದ್ದಾರೆ.

ಕಾಂಗ್ರಾ ಶೈಲಿ (ಕ್ರಿ. ಶ. ೧೮ನೆಯ ಶತಮಾನ)

೧೮ನೆಯ ಶತಮಾನದ ಪೂರ್ವಾರ್ಧದಲ್ಲಿ ಚಿತ್ರಕಲಾವಿದರಿಗೆ ದೆಹಲಿ ಆಳರಸರ ಆಶ್ರಯ ತಪ್ಪಿತು. ಹೀಗಾಗಿ ಅಲ್ಲಿನ ಹಲವಾರು ಕಲಾವಿದರು ಹಿಮಾಲಯದ ತಪ್ಪಲಿಗೆ ವಲಸೆ ಹೋದರು. ಈ ಕಲಾವಿದರು ಮೂಲತಃ ರಜಪೂತ ಶೈಲಿಯ ಕಲಾವಿದರಾಗಿದ್ದು ನಂತರ ಕಾಂಗ್ರಾಶೈಲಿಗೆ ಬದಲಾದವರು. ಅಂತೆಯೇ ಕಾಂಗ್ರಾ ಕಲೆಯನ್ನು ರಜಪೂತ ಕಲೆಯ ಒಂದು ಶಾಖೆಯೆಂದೇ ಪರಿಗಣಿಸಲಾಗುತ್ತದೆ. ಕಾಂಗ್ರಾ ಚಿತ್ರಕಲೆ ಉಗಮವಾದುದು ಗುಳೇರ್‌ನಲ್ಲಿ. ಹಾಗಿದ್ದರೂ ಇದರಲ್ಲಿ ಹಿಮಾಲಯ ಪರ್ವತಶ್ರೇಣಿಯ ಕೆಳಗಿನ ಕಾಂಗ್ರಾ ಮುಂದಾಳತ್ವ ವಹಿಸಿದ್ದರಿಂದ ಇದಕ್ಕೆ 'ಕಾಂಗ್ರಾ ಶೈಲಿ' ಎಂದು ಹೆಸರಾಯಿತು ಸಿಖ್ಖರ ಕೇಂದ್ರಗಳಾದ

ಲಾಹೋರ್ ಮತ್ತು ಅಮೃತಸರದಲ್ಲಿ ಮಹಾರಾಣಾ ರಣಜಿತ್‌ಸಿಂಗ್ ಆಳುತ್ತಿದ್ದು ಅಲ್ಲಿಯೂ ಕಾಂಗ್ರಾ ಕಲಾವಿದರಿಗೆ ಆಶ್ರಯ ದೊರಕಿತು.

ಕಾಂಗ್ರಾ ಶೈಲಿಯು ಅಜಂತಾ ಕಲೆಯಂತೆಯೇ ರೇಖಾ ಪ್ರಮುಖವಾದುದು. ಇದಕ್ಕೆ ಉದಾಹರಣೆಯಾಗಿ 'ಬಾರಾಮಾಸ' ಚಿತ್ರಗಳನ್ನು ನೋಡಬಹುದು. ಈ ಶೈಲಿಯಲ್ಲಿ ಈ ರೇಖಾ ಲಾಲಿತ್ಯದೊಂದಿಗೆ ಸೂಕ್ಷ್ಮ ವಿವರಗಳು, ಅಲಂಕರಣಗಳೂ ಗಮನಾರ್ಹವಾಗಿವೆ. ಇಲ್ಲಿನ ಬಹುತೇಕ ವ್ಯಕ್ತಿ ಚಿತ್ರಗಳು ಪಾರ್ಶ್ವ ಚಿತ್ರಗಳಾಗಿವೆ. ಈ ಶೈಲಿಯಲ್ಲಿ ಹನ್ನೆರಡು ಋತುಗಳು (ಬಾರಾಮಾಸ) ಅಷ್ಟನಾಯಿಕೆಯರು, ರಾಧಾಕೃಷ್ಣ, ರಾಸಕ್ರೀಡೆ, ಗೀತಗೋವಿಂದ, ಭಾಗವಂತ ಪುರಾಣ, ಉತ್ಸವಗಳು, ಪ್ರಣಯ ಮುಂತಾದವುಗಳೊಂದಿಗೆ ರಾಮಾಯಣದ ಸನ್ನಿವೇಶಗಳನ್ನು ಕಾಣಬಹುದು. ಹಾಗಿದ್ದರೂ ಕಾಂಗ್ರಾ ಶೈಲಿಯ ಕೃತಿಗಳು ಶೃಂಗಾರ ರಸಪ್ರಧಾನವಾದುದಾಗಿವೆ. ೧೯೦೫ರಲ್ಲಿ ಆದ ಭೂಕಂಪವೊಂದರಲ್ಲಿ ಕಾಂಗ್ರಾ ಪಟ್ಟಣ ನಾಶವಾಗುವುದರೊಂದಿಗೆ ಈ ಶೈಲಿಯ ಅವಸಾನವೂ ಆಯಿತು ಎನ್ನಲಾಗಿದೆ.

ಬಂಗಾಳ ಕಲೆ

ನಮ್ಮ ದೇಶದಲ್ಲಿ ಆಂಗ್ಲರ ಪ್ರಭುತ್ವವು ನಮ್ಮ ಭಾರತೀಯ ಲಲಿತಕಲೆಗಳ ಕ್ಷೇತ್ರದಲ್ಲಿ ಅಲ್ಲೋಲಕಲ್ಲೋಲವುಂಟುಮಾಡಿತು. ಇದರಿಂದಾಗಿ ಸಾವಿರಾರು ವರ್ಷಗಳಿಂದ ಬೆಳೆದು ಬಂದಿದ್ದ ನಮ್ಮ ಸಾಂಪ್ರದಾಯಿಕ ಕಲೆಗಳು ಹಿನ್ನೆಲೆಗೆ ಸರಿದಿದ್ದವು. ಬ್ರಿಟಿಷರ ಆಳ್ವಿಕೆಯಲ್ಲಿ ಆರಂಭವಾದ ಪ್ರಮುಖ ಕಲಾಶಾಲೆಗಳಲ್ಲಿ ಗ್ರೀಕ್, ರೋಮನ್‌ಶಿಲ್ಪ ಮಾದರಿಗಳನ್ನು ಮುಂದಿಟ್ಟುಕೊಂಡು ಪ್ರತಿಚಿತ್ರ ಮಾಡುವುದನ್ನು ಮುಖ್ಯವಾಗಿ ಬೋಧಿಸಲಾಗುತ್ತಿತ್ತು. ಚಿತ್ರದ ತಂತ್ರ ಹಾಗೂ ನಿರ್ವಹಣೆಯಲ್ಲೂ ಪಾಶ್ಚಾತ್ಯ ಕ್ರಮವನ್ನು ಅನುಸರಿಸಿದ್ದರಿಂದ ಇಡೀ ದೇಶದಲ್ಲಿ ಬ್ರಿಟಿಶ್ ಶೈಲಿಯ ಕಲೆಯೇ ಮುಂಚೂಣಿಗೆ ಬಂತು.

ಇಂತಹ ಸಂದರ್ಭದಲ್ಲಿ ಬಂಗಾಲದಲ್ಲಿ ಹೊಸ ಚಿಂತನೆ ಆರಂಭವಾಯಿತು. ೧೮೯೬ರಲ್ಲಿ ಕಲ್ಕತ್ತಾ ಕಾಲೇಜ್ ಆಫ್ ಆರ್ಟ್‌ನ ಪ್ರಿನ್ಸಿಪಾಲರಾಗಿ ಬಂದ ಇ.ಬಿ. ಹ್ಯಾವೆಲ್ ಅವರು ಆಗ ದೇಶದಲ್ಲಿ ಚಲಾವಣೆಯಲ್ಲಿದ್ದ ಕಲಾಪ್ರಕಾರಗಳ ಬಗ್ಗೆ ಬೇಸರ ವ್ಯಕ್ತಪಡಿಸಿದರಲ್ಲದೆ, ಇಲ್ಲಿನ ಕಲಾವಿದರು ಭಾರತೀಯ ಕಲಾ ಪರಂಪರೆಯ ದಿಕ್ಕಿನಲ್ಲಿಯೇ ಬೆಳೆಯಬೇಕೆಂದು ಆಶಿಸಿದರು. ತಮ್ಮ ಈ ಆಶಯವನ್ನು ಅಲ್ಲಿನ ಕಲಾವಿದರಲ್ಲಿ, ಕಲಾ ವಿದ್ಯಾರ್ಥಿಗಳಲ್ಲಿ ವ್ಯಕ್ತಪಡಿಸಿ, ಅವರನ್ನು ಈ ದಿಸೆಯಲ್ಲಿ ತೊಡಗಿಸಿದರು.

ಬಂಗಾಳದ ಪ್ರಮುಖ ಕಲಾವಿದರಾಗಿದ್ದ ಬಾಬು ಅಬನೀಂದ್ರನಾಥ ಠಾಕೂರ್ ಹಾಗೂ ಗಗನೇಂದ್ರನಾಥ ಠಾಕೂರರ ನೇತೃತ್ವದಲ್ಲಿ ನಮ್ಮ ಚಿತ್ರಕಲೆಯ ಪುನರುಜ್ಜೀವನ ಚಳವಳಿ ಆರಂಭವಾಯಿತು. ಭಾರತೀಯ ಹಾಗೂ ಚೀನಾ ದೇಶದ ಕಲೆಗಳ ಸತ್ವವನ್ನು ಹೀರಿದಂತಹ ಹೊಸದೊಂದು ಶೈಲಿಯ ಕೃತಿಗಳನ್ನು ಇಲ್ಲಿನ ಕಲಾವಿದರು ರಚಿಸಲಾರಂಭಿಸಿದರು. ಅಂತೆಯೇ

ಈ ಕಾಲದ ಕಲೆಯನ್ನು 'ಬಂಗಾಳ ಪುನರುಜ್ಜೀವನ ಕಲೆ' ಎಂದು ಕರೆಯಲಾಯಿತು. ಅಬನೀಂದ್ರನಾಥ ಠಾಕುರರು ಅಜಂತಾ, ಸಿತ್ತನ್‌ವಾಸಲ್, ಬಾಗ್ ಗುಹಾಂತರ ದೇವಾಲಯಗಳು, ಪಹಾಡಿ, ಜಯಪುರ ಕಲಂ, ಮೊಘಲ್ ಸಂಪ್ರದಾಯಗಳ ಕಡೆಗೆ ಅಂದಿನ ಕಲಾವಿದರ ಲಕ್ಷ್ಯವನ್ನು ಸೆಳೆಯುವ ಮೂಲಕ ಪ್ರಾಚೀನ-ಅರ್ವಾಚೀನಗಳಿಗೆ ಸೇತುವೆ ಕಟ್ಟಿದರು. ಅಂತೆಯೇ ನಂದಲಾಲ್ ಬೋಸ್, ಅಸಿತ್ ಕುಮಾರ್ ಹಲ್ದರ್, ಕ್ಷಿತಿನ್ ಮಜುಂದಾರ್, ದೇವಿಪ್ರಸಾದ್ ರಾಯ್ ಚೌಧರಿ ಮುಂತಾದ ಕಲಾವಿದರು ಈ ದಿಸೆಯಲ್ಲಿ ಮುನ್ನೆಲೆಗೆ ಬಂದರು.

ಮೈಸೂರು ಚಿತ್ರಕಲೆ (೧೯ ಹಾಗೂ ೨೦ನೆಯ ಶತಮಾನ)

೧೯ನೆಯ ಶತಮಾನದ ಆದಿಯಲ್ಲಿ ರಜಪೂತ ಕಲೆಯು ಕ್ಷೀಣಿಸುತ್ತಾ ಬಂದಂತಹ ಸಂದರ್ಭದಲ್ಲಿ ತಂಜಾವೂರಿನ ಶರಭೋಜಿ ಮಹಾರಾಜರು ಹಲವು ಕಲಾವಿದರಿಗೆ ಆಶ್ರಯ ನೀಡಿದರು. ಅಲ್ಲಿನ ಕಲಾವಿದರು ರಚಿಸಿದ ಕೃತಿಗಳ ಪ್ರಭಾವವು ಮೈಸೂರಿನ ಅರಸರ ಮೇಲೆಯೂ ಆಯಿತು. ಇದರ ಫಲವಾಗಿ ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಶ್ರಯದಲ್ಲಿ ಮೈಸೂರು ಪದ್ಧತಿಯ ಚಿತ್ರಕಲೆ ಅಭಿವೃದ್ಧಿ ಹೊಂದಿತು. ಮುಮ್ಮಡಿ ಕೃಷ್ಣರಾಜರು 'ಶ್ರೀತತ್ವ ನಿಧಿ' ಎಂಬ ಗ್ರಂಥವೊಂದನ್ನು ಬರೆದಿದ್ದು, ೫೩೮ ಪುಟಗಳ ಈ ಗ್ರಂಥದಲ್ಲಿ ನೂರಾರು ಚಿತ್ರಗಳನ್ನು ಕಲಾವಿದರಿಂದ ಬರೆಸಿದ್ದಾರೆ. ದೇವತೆಗಳು, ಮೃಗ-ಪಕ್ಷಿಗಳು, ಶಸ್ತ್ರಾಸ್ತ್ರಗಳು, ಚದುರಂಗದಾಟ ಮುಂತಾದ ವಸ್ತು-ವಿಷಯದ ಚಿತ್ರಗಳು ಈ ಗ್ರಂಥದಲ್ಲಿ ಪ್ರಮುಖವಾಗಿವೆ.

ಮೈಸೂರಿನ ಮಹಾರಾಜರು ೧೮೬೦ರಲ್ಲಿ ಜಗನ್ಮೋಹನಚಿತ್ರಶಾಲೆಯನ್ನು ಕಟ್ಟಿಸಿದರು. ಈ ಚಿತ್ರಶಾಲೆಯಲ್ಲಿ ಹಲವಾರು ಅಪೂರ್ವ ಕರಕುಶಲ ವಸ್ತುಗಳೊಂದಿಗೆ ಚಿತ್ರಗಳನ್ನು ಮುಖ್ಯವಾಗಿ ಪ್ರದರ್ಶಿಸಲಾಗಿದೆ. ಇವುಗಳಲ್ಲಿ ಮೈಸೂರು ಅರಸರ ವಂಶವೃಕ್ಷ ಕುರಿತ ಹಲವಾರು ತೈಲಚಿತ್ರಗಳೊಂದಿಗೆ ಜಂಬೂಸವಾರಿ, ಹುಲಿ ಬೇಟೆ, ವಸಂತೋತ್ಸವ, ದೇವರ ಚಿತ್ರಣ, ಪಟ್ಟಾಬಿಷೇಕದ ದೃಶ್ಯಾವಳಿ, ಮೊಘಲ್ ಕಲಾಕೃತಿಗಳು. ರಾಜಾರವಿವರ್ಮನ ಕಲಾಕೃತಿಗಳು ಗಮನಾರ್ಹವಾದುವು. ಈ ಬಗೆಯ ಹಲವಾರು ಕಲಾಕೃತಿಗಳ ಅಪೂರ್ವ ಸಂಗ್ರಹದಿಂದಾಗಿ ಇದು ದೇಶದ ಅತ್ಯುತ್ತಮ ಕಲಾಸಂಗ್ರಹಾಲಯಗಳಲ್ಲಿ ಒಂದೆನಿಸಿದೆ. ಅರಮನೆಯಲ್ಲಿ ಕೆ.ವೆಂಕಟಪ್ಪ, ಕೇಶವಯ್ಯ, ನಾಗರಾಜು, ಸುಬ್ರಮಣ್ಯರಾಜು ಮುಂತಾದ ಕಲಾವಿದರ ಕಲಾಕೃತಿಗಳಿವೆ. ಅರಸರು ಆಸ್ಥಾನದಲ್ಲಿ ವೈ.ಸುಂದರಯ್ಯ, ಎಲ್ಲಪ್ಪ, ತಂಜಾವೂರು ಕೊಂಡಯ್ಯ, ನಗೋನಳ್ಳಿ ನಾರಾಯಣಪ್ಪ, ಅಳಸಿಂಗಯ್ಯ ಮುಂತಾದ ಕಲಾವಿದರನ್ನು ನೇಮಿಸಿಕೊಂಡಿದ್ದರು. ಅರಮನೆಯಲ್ಲಿರುವ ಪುಸ್ತಕದ ಹಸ್ತಪ್ರತಿಯೊಂದರಲ್ಲಿ ಚಿತ್ರಗಾರ ವೀರಣ್ಣ ಅವರು ಹಲವಾರು ಕಿರುಚಿತ್ರಗಳನ್ನು ರಚಿಸಿದ್ದಾರೆ.

ಕಲಾಭಿವೃದ್ಧಿಯ ಸಲುವಾಗಿ ನಾಲ್ಮಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನಲ್ಲಿ

ಕಲಾಶಾಲೆ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ಅನ್ನು ಆರಂಭಿಸಿ, ಈ ಪ್ರದೇಶದಲ್ಲಿ ಕಲಾ ಚಟುವಟಿಕೆಗಳು ಬೆಳೆಯಲು ಕಾರಣರಾದರು. ಇಂದು ಚಾಮರಾಜೇಂದ್ರ ಅಕಾಡೆಮಿ ಆಫ್ ವಿಶುಯಲ್ ಆರ್ಟ್ (ಕಾವಾ) ಆಗಿ ಪರಿವರ್ತಿತಗೊಂಡಿರುವ ಈ ಶಾಲೆಯಲ್ಲಿ ನೂರಾರು ಹೆಸರಾಂತ ಕಲಾವಿದರು, ಕರಕುಶಲ ಕಲಾವಿದರು ಶಿಲ್ಪಿಗಳು ಸಿದ್ಧಗೊಂಡಿದ್ದಾರೆ.

ಮೈಸೂರಿನ ಸಮೀಪದ ಶ್ರೀರಂಗಪಟ್ಟಣದ ದರಿಯಾದೌಲತ್ ಅರಮನೆಯಲ್ಲಿ ಕೂಡಾ ಗಮನಾರ್ಹವಾದ ಚಿತ್ರಗಳಿವೆ. ವಿಶೇಷತಃ ಯುದ್ಧದ ದೃಶ್ಯಗಳು, ಅಶ್ವದಳ, ಕಾಲಾಳುಗಳು, ಆನೆಗಳು, ಒಂಟೆಗಳು ಮುಂತಾದುವುಗಳ ಚಿತ್ರಗಳು ಇಲ್ಲಿವೆ, ಇದರಂತೆಯೇ ಹಲವಾರು ರಾಜರುಗಳ ಭಾವಚಿತ್ರಗಳು, ಕಿತ್ತೂರ ರಾಣಿ, ಮಹಮ್ಮದ್ ಆಲಿ, ತಂಜಾವೂರಿನ ರಾಜ, ಬಾಲಾಜಿರಾವ್ ಪೇಷ್ವಾ, ಮುಮ್ಮಡಿ ಕೃಷ್ಣರಾಜ ಒಡೆಯರ್, ಮಾಗಡಿ ಕೆಂಪೇಗೌಡ, ಚಿತ್ರದುರ್ಗದ ಮದಕರಿನಾಯಕ, ಆರ್ಕಾಟ್ ಹಾಗೂ ಸರ್ವಕಾಲಿನ ನವಾಬರ ಚಿತ್ರಗಳೂ ಇವೆ. ಈ ಕಲಾಕೃತಿಗಳ ರಚನೆಗೆ ಟಿಪ್ಪುಸುಲ್ತಾನನೂ ಪ್ರೋತ್ಸಾಹ ನೀಡಿದ್ದಾನೆ.

ಮೈಸೂರಿನ ಆಳರಸರ ಸಂದರ್ಭದಲ್ಲಿ ಈ ಕೃತಿಗಳೊಂದಿಗೆ ಶ್ರವಣಬೆಳಗೊಳ, ಶ್ರೀರಂಗ ಪಟ್ಟಣ, ಹರದನಹಳ್ಳಿ, ಹಿರಿಯೂರು, ಗುಬ್ಬಿ, ಚಾಮರಾಜನಗರ, ತಲಕಾಡು, ಬೊಪ್ಪಗೌಡನಪುರ ಮುಂತಾದ ಕಡೆಗಳಲ್ಲಿರುವ ಚಿತ್ರ ಕೃತಿಗಳನ್ನು ಗಮನಿಸುವುದು ಅವಶ್ಯ. ಶ್ರವಣ ಬೆಳಗೊಳದ ಶಾಂತಿನಾಥ ಬಸದಿ ಹಾಗೂ ಜೈನ ಮಠಗಳಲ್ಲಿ ವಿಪುಲವಾಗಿ ಬಿತ್ತಿಚಿತ್ರಗಳಿವೆ. ಇಲ್ಲಿ ಜಿನ ಚಕ್ರವರ್ತಿಗಳ ಜೀವನಕ್ಕೆ ಸಂಬಂಧಿಸಿದ ಕೃತಿಗಳೊಂದಿಗೆ, ಜಾತ್ರೆ, ರಥೋತ್ಸವ, ದ್ವಾರಪಾಲಕರು ಮುಂತಾದ ಭಿತ್ತಿಚಿತ್ರಗಳೂ ಇವೆ. ತುಮಕೂರಿನ ಬಳಿಯ ಸಿಬಿಯಲ್ಲಿರುವ ನರಸಿಂಹ ದೇವಾಲಯದಲ್ಲಿ ಕೂಡಾ ಗಮನಾರ್ಹವಾದ ಹಲವಾರು ಉದಾಹರಣೆಗಳು ಹಿಂದಿನ ಮೈಸೂರು ಪ್ರದೇಶದಲ್ಲಿದ್ದ ಚಿತ್ರಕಲಾ ಪರಂಪರೆಯನ್ನು ಸೂಚಿಸುತ್ತವೆ.

ಹೀಗೆ ಆದಿಕಾಲದಿಂದ ಹಲವು ಶತಮಾನಗಳಲ್ಲಿ, ನಮ್ಮ ದೇಶದ ವಿವಿಧ ಪ್ರದೇಶಗಳಲ್ಲಿ ಅರಳಿದಂತಹ ಭಾರತೀಯ ಕಲೆಯ ವಿವಿಧ ಪ್ರಕಾರಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸೂಚ್ಯವಾಗಿ ಪ್ರಸ್ತಾಪಿಸಲಾಗಿದೆ. ಈ ವೈವಿಧ್ಯಮಯವಾದ ಈ ವಿವಿಧ ಶೈಲಿಗಳ, ವಿವಿಧ ಪ್ರಕಾರಗಳ ಕಲೆಗಳು ನಮ್ಮ ದೇಶದ ಜನರ ಕಲಾಪ್ರಜ್ಞೆಗೆ, ಕಲಾವಂತಿಕೆಗೆ ಸಾಕ್ಷಿಯಾಗಿವೆ. ಅಷ್ಟೇ ಅಲ್ಲ, ತನ್ನದೇ ಆದ ಹಲವಾರು ವೈಶಿಷ್ಟ್ಯಗಳುಳ್ಳ ಧರ್ಮದ ಸುತ್ತ ಬೆಳೆದು ಈ ಕಲಾಪ್ರಕಾರಗಳು ನಮ್ಮ ಜನಜೀವನವನ್ನು ಸುಂದರಗೊಳಿಸಿದ್ದಷ್ಟೇ ಅಲ್ಲ, ವಿಶ್ವಮಟ್ಟದಲ್ಲಿ ಭಾರತೀಯ ಕಲೆಯನ್ನು ಪ್ರಸಿದ್ಧಗೊಳಿಸುವಲ್ಲಿಯೂ ಸಹಕರಿಸಿತು. ಈ ಕುರಿತು ಹೆಚ್ಚಿನ ಮಾಹಿತಿಯನ್ನು ಅರಿಯಬಯಸುವವರು ದೀರ್ಘ ಗ್ರಂಥಗಳನ್ನು ನೋಡುವುದು ಒಳಿತು. ನಮ್ಮ ಮಹಾ ಪರಪಂರೆಯಲ್ಲಿ ಕಲೆಯು ಧರ್ಮದ ಅಂಗವಾಗಿ ಬೆಳೆದುದೇ ಹೆಚ್ಚು. ಆ ಸಂಪ್ರದಾಯದ ಬೇರುಗಳು ನಮ್ಮಲ್ಲಿ ಇನ್ನೂ ಉಳಿದಿವೆ. ಈ ಪ್ರಜ್ಞೆ ನಮ್ಮಲ್ಲಿ ಮತ್ತೊಮ್ಮೆ ಜಾಗೃತವಾದರೆ ನಮ್ಮ ಪ್ರಾಚೀನ ಸಂಪ್ರದಾಯವು ಪುನರುಜ್ಜೀವನಗೊಳ್ಳುವುದರಲ್ಲಿ ಸಂದೇಹವಿಲ್ಲ.

ಜನಪ್ರಿಯ ಕಲಾಮಾಲಿಕೆಯ ಪುಸ್ತಕಗಳು

				ರೂ.
1.	ಶಿಲ್ಪಕಲೆ	–	ವಿಜಯ ರಾವ್	5–00
2.	ಸರ್‍ರಿಯಲಿಸಂ	–	ಎಸ್. ಮರಿಶಾಮಾಚಾರ್	5–00
3.	ದೃಶ್ಯಕಲೆ ಎಂದರೇನು?	–	ಚಿ. ಸು. ಕೃಷ್ಣಸೆಟ್ಟಿ	5–00
4.	ಇಂಪ್ರೆಷನಿಸಂ	–	ಡಾ. ಅ. ಲ. ನರಸಿಂಹನ್	5–00
5.	ಅಬ್‌ಸ್ಟ್ರಾಕ್ಟ್ ಕಲೆ	–	ಆರ್. ಎ. ಶಾಂತರಾಜ್	5–00
6.	ಫೋಟೋರಿಯಲಿಸಂ	–	ಕೆ. ವಿ. ಸುಬ್ರಹ್ಮಣ್ಯಂ	5–00
7.	ಜನಪದ ಕಲೆ	–	ಡಾ. ಎಸ್. ಸಿ. ಪಾಟೀಲ್	5–00
8.	ದೃಶ್ಯ ಕಲೆಗಳ ಗುಣ ಗ್ರಹಣ	–	ಡಾ. ಅ. ಲ. ನರಸಿಂಹನ್	5–00
9.	ಸಾಂಪ್ರದಾಯಿಕ ಶಿಲ್ಪಕಲೆ	–	ಪ್ರೊ. ಶೀಲಾಕಾಂತ ಪತ್ತಾರ	5–00
10.	ಪೋಸ್ಟ್ ಮಾಡರ್ನಿಸಂ	–	ನೇಮಿರಾಜ ಶೆಟ್ಟಿ	5–00
11.	ಚಿತ್ರಕಲೆ ಮತ್ತು ಮನೋವಿಕಾಸ	–	ಡಾ. ಸಿ. ಆರ್. ಚಂದ್ರಶೇಖರ್	5–00

ಇಂದು ಕಲೆ ಹಾಗೂ ಜನಸಾಮಾನ್ಯರ ನಡುವೆ ಭಾರೀ ಅಂತರವಿದೆ. ಇಂದಿನ ಸಮಕಾಲೀನ ಕಲೆಯು ಜನಸಾಮಾನ್ಯರಿಗೆ ಅರ್ಥವಾಗದಿರುವುದೇ ಇದಕ್ಕೆ ಕಾರಣ ಎಂದು ಹಲವರ ಅಭಿಪ್ರಾಯ. ದೃಶ್ಯ ಕಲೆಗಳನ್ನು ಆಸ್ವಾದಿಸುವ ದೃಷ್ಟಿಯಿಂದ ನಮ್ಮ ಸಾಮಾನ್ಯ ಶಿಕ್ಷಣದಲ್ಲೂ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ. ಅಂತೆಯೇ ಈ ಕೊರತೆಗಳನ್ನು ಸ್ವಲ್ಪವಾದರೂ ತುಂಬುವುದು ಈ ಜನಪ್ರಿಯ ಕಲಾಮಾಲಿಕೆಯ ಆಶಯ. ಹೀಗೆ ಸಾಮಾನ್ಯರಿಗೆ ದೃಶ್ಯಕಲೆಗಳ ಪ್ರಾಥಮಿಕ ಜ್ಞಾನ ಒದಗಿಸುವ ದೃಷ್ಟಿಯಿಂದಲೇ ಇದನ್ನು ರೂಪಿಸಲಾಗಿದೆ. ಇದರಲ್ಲಿ ದೃಶ್ಯಕಲೆಯ ತಾತ್ವಿಕ ಅಂಶಗಳು, ಮಾಧ್ಯಮಗಳು, ತಂತ್ರಗಳು, ಇತಿಹಾಸ, ಆಧುನಿಕ ಕಲಾ ಪಂಥಗಳು ಇತ್ಯಾದಿ ಹಲವು ವಿಷಯಗಳನ್ನು ಕುರಿತಂತಹ ಹೊತ್ತಿಗೆಗಳನ್ನು ತರುತ್ತಿದ್ದೇವೆ. ತನ್ಮೂಲಕ ದೃಶ್ಯಕಲೆಯನ್ನು ಆಸ್ವಾದಿಸುವ ದಿಸೆಯಲ್ಲಿ ಹೆಚ್ಚಿನ ಜನರು ತೊಡಗುತ್ತಾರೆಂಬ ಮಹತ್ವಾಕಾಂಕ್ಷೆ ಈ ಮಾಲಿಕೆಯದು. ಹೀಗೆ ಜನರನ್ನು 'ಸಹೃದಯ' ರನ್ನಾಗಿಸುವ ದಿಸೆಯಲ್ಲಿ ಇದೊಂದು ಪುಟ್ಟ ಪ್ರಯತ್ನ.

ಚಿ. ಸು. ಕೃಷ್ಣ ಸೆಟ್ಟಿ
ಸಂಪಾದಕರು